

**ಶ್ರೀ ಸರ್ವಮೂಲ ಸಂದೇಶ**

## ॥ವಿಷ್ಣೋಃ ತದನುಗಾನಾಂಚ ಪ್ರೀತಿಕೃತ್ ಧರ್ಮಈರಿತಃ ॥

ಎಲ್ಲರ ಹೃದಯದೊಳಗಿದ್ದು ಎಲ್ಲರನ್ನೂ ಎಲ್ಲಾ ಕಾಲದಲ್ಲಿ ಪ್ರೇರಿಸುವ ಹಾಗೂ ಜಗತಿನೆಲ್ಲೆಡೆ ತುಂಬಿರುವ ಎಲ್ಲಾ ವೈದಿಕ ಲೌಕಿಕ ಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾದ ಆದ್ದರಿಂದಲೇ ವಿಷ್ಣು ಎಂದು ಕರೆಯಲ್ಪಡುವ ನಾರಾಯಣನ ಪ್ರೀತಿಗೆ ಹಾಗೂ ಅವನ ಭಕ್ತರ ಪ್ರೀತಿಗೆ ಕಾರಣವಾದ ಕ್ರಿಯೆಗಳೇ ಧರ್ಮ ಎಂದೆನಿಸಿಕೊಳ್ಳಲ್ಪಡುತ್ತದೆ.

**-ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

ಸಂಪುಟ-೮ ಸಂಚಿಕೆ-೧೧ ವಿರೋಧಿ ಸಂ.॥ ಆಶ್ವಯುಜ -ಕಾರ್ತೀಕ ನವೆಂಬರ್ ೨೦೦೯

ಸಂಸ್ಥಾಪಕರು:

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ವಿದ್ಯಾಮಾನ್ಯ ಪ್ರಕಾಶನ

ÎÅàÊÜá¨...ÖÜêÑàPæàÍÜ£àÃÜì ÓÝÌËá¿áÃ..Óè¾ÃÜPÜ oÅÓ.r (Ä.)

ÎÅà±ÜÈÈÊÜPÃÜá ÖÜêÑàPæàÍÜ ÊÜásÜ, EvÜá²

**www.palimarumatha.org**

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | ೧ |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು | ೩ |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | ೫ |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | ೮ |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ್ | ೧೧ |
| **ಅವಲೋಕನ** | ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ | ೧೨ |
| **ಕಠೋಪನಿಷತ್** | ಡಾ॥ ಎನ್. ವೇಂಕಟೇಶ್ ಆಚಾರ್ಯ | ೧೪ |
| **ನಾರಾಯಣವರ್ಮ** | ವಿ॥ ಬೆ.ನಾ ವಿಜಯೀಂದ್ರಾಚಾರ್ಯ | ೧೬ |
| **ಮಾರ್ಕಂಡೇಯ ಪುರಾಣ** | ವಿ॥ ಅಡ್ವೆ ಲಕ್ಷ್ಮೀಶಾಚಾರ್ಯ | ೧೮ |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸ ಭಟ್ | ೨೦ |
| **ಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | ೨೨ |
| **ವಿಷ್ಣುಪುರಾಣ** | ಸ್ಫೂರ್ತಿ | ೨೪ |
| **ಜ್ಯೌತಿಷ ಚಿಂತನೆ** | ವಿ॥ ಶ್ರೀ ಶ್ರೀಪತಿ ಉಪಾಧ್ಯಾಯ | ೨೬ |
| **ವಿಶ್ವನಲ್ಲಿ ವಿಶ್ವರೂಪದ ದರ್ಶನ** | ಶ್ರೀ ಡಿ. ಗುರುಪ್ರಸಾದ್‌ಭಟ್ | ೩೧ |
| **ಅಯನಗಳ ಆರಂಭ** | ಶ್ರೀ ಜಯಂತ ವ್ಯಾಸನಕೆರೆ | ೩೩ |
| **ವಿಚಾರ ಮಂಥನ** | ಶ್ರೀ ಉಂಡಾರು ಭಾಷ್ಯಂ ಶ್ರೀನಿವಾಸಚಾರ್ಯ | ೩೫ |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | ೪೧ |



**ಪ್ರಕಾಶಕರು**

**ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ**

**ಪ್ರಧಾನ ಸಂಪಾದಕರು**

**ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ**

**ಸಂಪಾದಕ ಮಂಡಳಿಃ**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ, ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀಲಕ್ಷ್ಮೀನಾರಾಯಣ ಶರ್ಮ, ಉಡುಪಿ

ಶ್ರೀ ಹರ್ಷ, ಬೆಂಗಳೂರು

ಮುಖಪುಟ ವಿನ್ಯಾಸಃ ಕೆ.ಎಮ್.  ಶೇಷಗಿರಿ, ಬೆಂಗಳೂರು

ಅಕ್ಷರ ವಿನ್ಯಾಸ: ಶ್ರೀಮತಿ ಸ್ವಾತಿ ಭಾಗವತ್, ಉಡುಪಿ

**ಬಿಡಿ ಪ್ರತಿ** : ರೂ. ೮.೦೦

**ವಾರ್ಷಿಕ ಚಂದಾ** : ರೂ.೯೦.೦೦

**೧೫ ವರ್ಷಕ್ಕೆ** : ರೂ.೧,೨೫೦.೦೦

**ಸದಸ್ಯರು** : ರೂ.೨,೨೫೦.೦೦

**ಪೋಷಕರು** : ರೂ.೩,೦೦೦.೦೦


**ಆಯಾಯಾ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವ ಗೀತೆ

-ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

**ಗ್ರಾಸಂ ವಿಸೃಷ್ಟಂ ದಿಷ್ಟೇನ ಮಹಾಂತಂ ಸ್ತೋಕಂ ಏವ ಚ**

**ಯದೃಚ್ಛಯಾ ಏವ ಆಪತಿತಂ ಗ್ರಸೇತ್ ಅಜಗರೋಽಕ್ರಿಯಃ**

ಭಗವಂತನು ಉದ್ಧವನಿಗೆ ಉಪದೇಶವನ್ನು ಮಾಡುತ್ತಾ ಯದು ಚಕ್ರವರ್ತಿಗೆ ಅವಧೂತರು ನೀಡಿದ ಸ್ವಾನುಭವವನ್ನು ಉದ್ಧವಗೀತೆಯಲ್ಲಿ ವಿವರಿಸಿದ್ದಾನೆ. ಅವಧೂತರು ತನ್ನ ಇಪ್ಪತ್ತನಾಲ್ಕು ಗುರುಗಳಲ್ಲಿ ಒಂಬತ್ತನೆಯವನಾದ ಅಜಗರನಿಂದ ಕಲಿತ ಪಾಠವನ್ನು ದಾಖಲೆಮಾಡಿದ್ದಾರೆ. ಅಜಗರ ಎಂದರೆ ಹೆಬ್ಬಾವು. ಹೆಬ್ಬಾವಿನಿಂದ ಕಲಿತಪಾಠವಾದರೂ ಏನು?

ಹೆಬ್ಬಾವಿನ ಪ್ರವೃತ್ತಿ ಅತಿ ವಿಚಿತ್ರವಾದುದು. ಅತಿ ದೀರ್ಘವಾದ ದೇಹವಾಗಿದ್ದರೂ ಕೂಡ ದೇಹದ ಬಗ್ಗೆ ಕಾಳಜಿಯೇ ಇಲ್ಲ ಅದಕ್ಕೆ. ಅಂದರೆ ಆಹಾರದ ಚಿಂತೆಯೇ ಇಲ್ಲ. ಇದ್ದದರಲ್ಲಿ, ಸಿಕ್ಕಿದರಲ್ಲಿ ತೃಪ್ತಿ ಪಡುವ ಅಪೂರ್ವ ಪ್ರಾಣಿ ಹೆಬ್ಬಾವು. ಆಹಾರಕ್ಕಾಗಿ ಎಂದೂ ಪ್ರಯತ್ನ ಪಟ್ಟಿಲ್ಲ. ಹಗಲಿಡೀ ಮಲಗುತ್ತಲೇ ಇರುತ್ತದೆ. **ಶಯೀತ ಅಹಾನಿ ಭೂರೀಣಿ.** ಅದರ ಅರ್ಥ ಆಹಾರಕ್ಕಾಗಿ ಬದುಕುವ ಪ್ರಾಣಿ ಅಲ್ಲ. ನಮ್ಮಲ್ಲೊಂದು ಸಮಸ್ಯೆ ಇದೆ ಆಹಾರಕ್ಕಾಗಿ ಬದುಕುವುದೋ, ಬದಕುವುದಕ್ಕಾಗಿ ತಿನ್ನುವುದೋ ಎಂದೋ? ಪ್ರಾಯಶಃ ನಮ್ಮ ಉತ್ತರ ಮೊದಲನೆಯದ್ದೇ. ತಿನ್ನುವುದೇ ಜೀವನದ ಗುರಿ. ಆದರೆ ಹೆಬ್ಬಾವು ಹಾಗಲ್ಲ. ಬದುಕುವುದಕ್ಕಾಗಿ ತಿನ್ನುವ ಪ್ರಾಣಿ ಅದು. ತನ್ನ ಬಾಯಲ್ಲಿ ಬಿದ್ದ ಆಹಾರದಿಂದ ಕಾಲ ಯಾಪನೆ ಮಾಡುವ ಒಳ್ಳೆಯ ಸ್ವಭಾವ ಹೆಬ್ಬಾವಿನದ್ದು. ಅದು ಸ್ವಲ್ಪ ಸಿಗಲಿ, ಬೇಕಾದಷ್ಟು ಸಿಗಲಿ. ನಿಶ್ಚಿಂತವಾಗಿ, ಹಾಯಾಗಿ ಜೀವಿಸುವ ಸುಜೀವಿ ಹೆಬ್ಬಾವು. ಹೆಬ್ಬಾವು ದುರ್ಬಲ ಎಂದು ಅರ್ಥ ಅಲ್ಲ. ಮನುಷ್ಯನನ್ನೇ ನುಂಗುವ ತಾಕತ್ತು ಹೆಬ್ಬಾವಿನದ್ದು. ಒಂದು ದಿನ ಆಹಾರ ಸಿಕ್ಕಿದರೆ ದಿನ ಗಟ್ಟಲೆ ಉಪವಾಸ ಆಚರಿಸುತ್ತದೆ. ನಮಗೆ ಹದಿನಾಲ್ಕು ದಿನ ತಿಂದು ಹದಿನೈದನೆಯ ದಿನ ಏಕಾದಶಿ ಅಂದರೆ ನಿರ್ಜಲ ಉಪವಾಸ ಮಾಡಲು ಸಂಕೋಚ ಪಡುತ್ತೇವೆ. ಹೆಬ್ಬಾವು ಹದಿನಾಲ್ಕು ದಿನ ಉಪವಾಸ ಕೂತು ಒಂದು ದಿನ ಆಹಾರ ಸ್ವೀಕರಿಸುತ್ತದೆ. ಒಂದು ರೀತಿಯಲ್ಲಿ ನಮಗಿಂತ ಹೆಬ್ಬಾವೇ ಶ್ರೇಷ್ಠ. ಇನ್ನು ವಿಚಾರ ಮಾಡಿದರೆ ನಮಗೂ ಹೆಬ್ಬಾವಿಗೂ ಹೋಲಿಕೆಯೇ ಸರಿಯಲ್ಲ.

**ಯದೃಚ್ಛಯಾ ಏವ ಆಪತಿತಂ ಗ್ರಸೇತ್**

ಹೆಬ್ಬಾವಿಗೆ ಗೊತ್ತು ಆಯುಷ್ಯಕೊಟ್ಟ ದೇವರು ಆಹಾರ ಕೊಟ್ಟೇ ಕೊಡುತ್ತಾನೆ ಎಂದು ನಾವು ಮಾಡಿದ ಪುಣ್ಯವನ್ನು(ದಿಷ್ಟ) ನಿಮಿತ್ತ ಮಾಡಿಕೊಂಡು ಭೋಗ ಭಾಗ್ಯಗಳನ್ನು

ಕರುಣಿಸುವುದಂತೂ ಅನುಭವ ಸಿದ್ಧ.

**ಮಹಾಂತಂ ಸ್ತೋಕಂ ಏವ ಚ**

ಇವತ್ತು ಸ್ವಲ್ಪವೇ ಭೋಗವು ಸಿಕ್ಕಿರಬಹುದು. ಆದರೆ ಅದೃಷ್ಟದ ಕಾಲ ಪಕ್ವವಾದಾಗ ಎರಡು ಕೈಗಲ್ಲಿ ಬಾಚಿದರೂ ದೋಚಲಾಗದಷ್ಟು ಸಿರಿ ಸಮೃದ್ಧಿಗಳನ್ನು ಧಾರಾಕಾರವಾಗಿ ಸುರಿಸುತ್ತಾನೆ ಎಂಬುದು ಸತ್ಯ. ನಮಗೆ ಅರಿಗಿಸಿ ಕೊಳ್ಳಲು ಅಶಕ್ಯವಾದ ಈ ವೇದಾಂತವನ್ನು ಅಜಗರ ಅರಗಿಸಿಕೊಂಡಿದೆ. ಇದಕ್ಕೆ ಅವಧೂತರಿಗೆ ಹೆಬ್ಬಾವು ಇಷ್ಟವಾಯಿತು.

**ಓಜ ಸಹೋ ಬಲ ಸಹಿತಂ**

ಸುಮ್ಮನೆ ಮಲಗುವುದು ಅಸಾಮರ್ಥ್ಯದ ಸೂಚನೆ ಅಲ್ಲವೇ ಅಲ್ಲ. ಹೆಬ್ಬಾವು ಓಜಸ್ಸಿನಿಂದ, ಸಹಸ್ಸಿನಿಂದ, ಬಲದಿಂದ, ದೃಢವಾದ ಕಾಯದಿಂದ ಕಂಗೊಳಿಸುತ್ತದೆ.

ಓಜಸ್ಸು ಅಂದರೆ ಇನ್ನೊಬ್ಬರನ್ನು ಸೋಲಿಸುವ ಶಕ್ತಿ. ಅಂದರೆ ಇನ್ನೊಬ್ಬರನ್ನು ಮಣಿಸುವ ಶಕ್ತಿ. ಮತ್ತೊಬ್ಬ ತನ್ನ ಕಾಲಿಗೆ ಬೀಳಲೇ ಬೇಕು.

ಸಹಸ್ಸು ಅಂದರೆ ಇನ್ನೊಬ್ಬರಿಗೆ ಬಾಗದೇ ಇರುವ ಶಕ್ತಿ. ಮತ್ತೊಬ್ಬರಿಗೆ ಮಣಿಯದೆ ಇರುವ ತಾಕತ್ತು. ಎಂದೆಂದೂ ಮತ್ತೊಬ್ಬರ ಮುಂದೆ ಕಾಲಿಗೆ ಬೀಳದ, ಕೈಚಾಚದೆ, ದೇಹಿ ಎಂದು ಯಾಚಿಸದ ಶಕ್ತಿ.

ಬಲ ಅಂದರೆ ಭಾರವನ್ನು ಹೊರುವ ಶಕ್ತಿ. ಎಷ್ಟು ಭಾರವನ್ನು ತಲೆಯ ಮೇಲೆ ಇಟ್ಟರೂ ಅಷ್ಟನ್ನೂ ತನ್ನ ಆತ್ಮ ಬಲದಿಂದ ಎತ್ತಿ ಧರಿಸುವ ಶಕ್ತಿ.

ಈ ಮೂರೂ ರೀತಿಯ ಶಕ್ತಿ ಅಜಗರನಂತೆ ಅವಧೂತನಿಗೂ ಸಮಾನವಾದುದು. ಅಜಗರನಿಗೂ ಆಹಾರದ ಸಮಸ್ಯೆ ಇಲ್ಲ ಅವಧೂತನಿಗೂ ಅಷ್ಟೇ. ಆಹಾರ ಇಲ್ಲದ ಅಜಗರ ದುರ್ಬಲನಲ್ಲ. ಯೋಗಿಯೂ ಅಬಲನಲ್ಲ. ಅಜಗರನು ಇನ್ನೊಬ್ಬರಿಗೆ ಮಣಿಯದವ, ಮತ್ತೊಬ್ಬರನ್ನು ಮಣಿಸುವವ. ಅವಧೂತನು ಈ ದೃಷ್ಟಿಯಲ್ಲಿ ಅಜಗರವನ್ನು ಮೀರಿ ನಿಂತವನೇ ಸರಿ. ಅವಧೂತನು ಆಹಾರಕ್ಕಾಗಿ ಚಡಪಡಿಸಿದವನು ಅಲ್ಲವೇ ಅಲ್ಲ. ಸಿಕ್ಕಿದರಲ್ಲಿ ತೃಪ್ತಿ ಪಡುವವನು. ಭಗವಂತನ ಅನುಗ್ರಹಕ್ಕಾಗಿ ಪ್ರಯತ್ನ ಪಡಬೇಕೇ ಹೊರತು ಭೋಗಕ್ಕಾಗಿ ಅಲ್ಲ. ಅವಧೂತ ಸೋಮಾರಿ ಅಲ್ಲ. ಅಲೆಮಾರಿ ಅಲ್ಲ. ಕಾಣುವವರ ದೃಷ್ಟಿಯಲ್ಲಿ ಮಾತ್ರ ಈತ ಅಪ್ರಯೋಜಕ. ಆತನಿಗೆ ಕಾಣುವವ ಅಮುಖ್ಯ. ಕಾಣದ ಭಗವಂತ ಮುಖ್ಯ. ಆ ಭಗವಂತನಿಗಾಗಿ ಸರ್ವವನ್ನು ತೊರೆದವ ಅವಧೂತ. ತನ್ನ ಜೀವನದ ಹಂಗನ್ನು ತೊರೆದವ ಈ ದೃಷ್ಟಿಯಲ್ಲಿ ಆಚಾರ್ಯರ ದ್ವಾದಶ ಸ್ತೋತ್ರದ **'ಕುರು ಭುಂಕ್ಷ್ವ ಚ ಕರ್ಮನಿಜಂ ನಿಯತಂ'** ನೂರಕ್ಕೆ ನೂರು ಪಾಲು ಸತ್ಯ. ಇದೇ ಅವಧೂತ ಅಜಗರನಿಂದ ಕಲಿತ ಪಾಠ. ★

ವಿದ್ವತ್ ಪ್ರಪಂಚ

# ಗೀತಾಮೃತ



-ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಬಂಧುಗಳ ದೇಹನಾಶದಿಂದ ದುಃಖವನ್ನು ಹೊಂದಿದ ಅರ್ಜುನನಿಗೆ ಶ್ರೀಕೃಷ್ಣನು ದೃಷ್ಟಾಂತಪೂರ್ವಕವಾಗಿ ಉಪದೇಶಮಾಡುತ್ತಾನೆ. ಪುರುಷನು ತನ್ನ ಜೀರ್ಣವಾದ ವಸ್ತ್ರವನ್ನು ತ್ಯಾಗಮಾಡಿ, ನೂತನ ವಸ್ತ್ರವನ್ನು ಸ್ವೀಕರಿಸುವಾಗ, ಅವನು ಜೀರ್ಣವಸ್ತ್ರ ತ್ಯಾಗಕ್ಕಾಗಿ ದುಃಖಿಸದೇ, ನೂತನ ವಸ್ತ್ರಧಾರಣ ಮಾಡುವುದರಿಂದ ಸಂತುಷ್ಟಿಯನ್ನು ಹೊಂದುತ್ತಾನೆ. ಅದೇ ರೀತಿ ಜೀವನು ದೇಹತ್ಯಾಗದಿಂದ ದುಃಖಕ್ಕೆ ಒಳಗಾಗುವುದಿಲ್ಲ. ಯಾಕೆಂದರೆ ಜೀರ್ಣವಾದ ಹಿಂದಿನ ದೇಹವನ್ನು ಬಿಟ್ಟು ನೂತನ ದೇಹವನ್ನು ಸ್ವೀಕರಿಸುವಾಗ, ನೂತನ ದೇಹಕ್ಕಾಗಿ ಸಂತೋಷವನ್ನು ಹೊಂದಬೇಕೇ ಹೊರತು ದುಃಖಕ್ಕೆ ಕಾರಣವಿಲ್ಲ.

ಇದೇ ದೃಷ್ಟಾಂತವನ್ನು ದೇಹಾತ್ಮಭೇದ ವಿಷಯದಲ್ಲೂ ಶ್ರೀಕೃಷ್ಣನು ಹೇಳಿರುತ್ತಾನೆ. ನಾಸ್ತಿಕರು ದೇಹ-ಆತ್ಮ ಒಂದೇ ಎಂದು ಹೇಳಿದಾಗ, ಅದು ಯುಕ್ತವಲ್ಲ. ಒಬ್ಬ ಪುರುಷನು ಒಂದು ವಸ್ತ್ರವನ್ನು ಬಿಟ್ಟು ಇನ್ನೊಂದು ವಸ್ತ್ರವನ್ನು ಸ್ವೀಕರಿಸುವಂತೆ ಜೀವನು ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಧರಿಸುವುದರಿಂದ ಜೀವನು ಬೇರೆ ದೇಹವು ಬೇರೆ ಎಂದು ತಿಳಿದುಕೊಳ್ಳಬೇಕು. ವಸ್ತ್ರವು ನಿಯಮೇನ ಜೀರ್ಣವಾಗುವಂತೆ ನಮ್ಮ ದೇಹವು ಸ್ವಇಚ್ಛೆಗೆ ವಿರುದ್ಧವಾಗಿಯಾದರೂ ಜೀರ್ಣವಾಗಿಯೇ ಆಗುತ್ತದೆ. ಇದರಿಂದ ಜೀವನು ಅಸ್ವತಂತ್ರ ಎಂದೂ ತಿಳಿಯಬೇಕು.

ಉತ್ತಮ ದೇಹವನ್ನು ನೀಡಿದಾಗ ಅದನ್ನು ಸ್ವಹಿತಕರ್ಮಾನುಷ್ಠಾನವನ್ನು ಮಾಡದೇ ವ್ಯರ್ಥಮಾಡಿದರೆ ಇನ್ನೊಂದು ಜನ್ಮದಲ್ಲಿ ಇದಕ್ಕಿಂತಲೂ ನಿಕೃಷ್ಟವಾದ ದೇಹವನ್ನು ಕೊಡುತ್ತಾನೆ. ಸದಾಚಾರ ಸಂಪನ್ನನ್ನಾಗಿ ಸ್ವಹಿತ ಕರ್ಮಾನುಷ್ಟಾನವನ್ನು ಮಾಡಿದರೆ ಇದಕ್ಕಿಂತಲೂ ಉತ್ಕೃಷ್ಟವಾದ ದೇಹವನ್ನು ನೀಡುತ್ತಾನೆ ಎಂಬುದನ್ನು ಇದೇ ವಸ್ತ್ರದೃಷ್ಟಾಂತದಿಂದ ತಿಳಿದುಕೊಳ್ಳಬಹುದು. ಈ ವಿಷಯದಲ್ಲಿ ವಸ್ತ್ರ ದೃಷ್ಟಾಂತ ಹೇಗೆ ಕೂಡುತ್ತದೆ? ಅಂದರೆ:- ಯಜಮಾನನು ತನ್ನ ಭೃತ್ಯರುಗಳಿಗೆ ಅನ್ನವಸ್ತ್ರಾದಿಗಳನ್ನು ನೀಡುವಾಗ ತನ್ನ ಆಜ್ಞಾನುಸಾರಿಯಾಗಿ ಕರ್ಮಮಾಡುವಂತಹ ಭೃತ್ಯರುಗಳಿಗೆ ಉತ್ತಮವಾದ ವಸ್ತ್ರಾದಿಗಳನ್ನು ಹಾಗೂ ತನಗೆ ಅನುಕೂಲರಲ್ಲದ ಭೃತ್ಯರುಗಳಿಗೆ ಸಾಧರಣ ವಸ್ತ್ರಾದಿಗಳನ್ನು ನೀಡುವಂತೆ, ಪರಮಾತ್ಮನು ತನ್ನ ಅಜ್ಞಾನುಸಾರಿಯಾಗಿ ಸ್ವವಿಹಿತ ಕರ್ಮಾನುಷ್ಠಾನವನ್ನು ಮಾಡುವವರಿಗೆ ಉತ್ಕೃಷ್ಟ ದೇಹವನ್ನೂ, ಹಾಗೆಯೇ ಇಂತಹ

ಕರ್ಮಾನುಚಾರಣೆ ಮಾಡದವರಿಗೆ ನಿಕೃಷ್ಟ ದೇಹವನ್ನು ನೀಡುತ್ತಾನೆಂಬುದು ಶ್ರೀಕೃಷ್ಣನ ಅಭಿಪ್ರಾಯ.

ಅರ್ಜುನನು ಜೀವ ನಾಶವಿಷಯದಲ್ಲಿ ತನ್ನ ಸಂಶಯವನ್ನು ವ್ಯಕ್ತಪಡಿಸುತ್ತಾನೆ. ದಕ್ಷಯಜ್ಞ ಸಂದರ್ಭದಲ್ಲಿ ರುದ್ರದೇವರು ತನ್ನ ಮಹಾಪ್ರಯತ್ನದಿಂದ, ಶಸ್ತ್ರದಿಂದ ದಕ್ಷಪ್ರಜಾಪತಿಯ ಶಿರಚ್ಛೇದವನ್ನು ಮಾಡಿದಂತೆ, ಯುದ್ಧದಲ್ಲಿ ಶಸ್ತ್ರದಿಂದ ಜೀವ ನಾಶವು ಸಂಭವಿಸುತ್ತದೆ ಎಂದು ಹೇಳಲು, ಶ್ರೀಕೃಷ್ಣನು ಈ ರೀತಿಯಾಗಿ ಸಮಾಧಾನವನ್ನು ತಿಳಿಸುತ್ತಾನೆ. ಪರಮಾತ್ಮನು ನಿತ್ಯದಲ್ಲಿ ಸರ್ವತ್ರವ್ಯಾಪಿಸಿದ್ದಾನೆ. ಅವನು ಸೃಷ್ಟಿ ಪ್ರಳಯಾದಿ ಅನೇಕ ಕಾರ್ಯಗಳನ್ನು ಮಾಡಿದಾಗಲೂ ತನ್ನ ಅಚಿಂತ್ಯ ಶಕ್ತಿಯಿಂದ ಯಾವುದೇ ರೀತಿಯ ವಿಕಾರವನ್ನು ಹೊಂದುವುದಿಲ್ಲ. ಇದು ಶಾಸ್ತ್ರಸಿದ್ಧ ವಿಷಯ. ಅಂತಹ ನಿತ್ಯ-ಅಚ್ಛೇದ್ಯ-ಅಭೇದ್ಯ-ಶಶ್ವದೇಕಪ್ರಕಾರನಾದ ಪರಮಾತ್ಮನಿಗೆ ಪ್ರತಿಬಿಂಬನಾದ ಜೀವನು ಶಸ್ತ್ರಾದಿಗಳಿಂದ, ಜಲವಾಯುಅಗ್ನಿಗಳಿಂದ ನಾಶಹೊಂದಲು ಸಾಧ್ಯವಿಲ್ಲ. ಯಾಕೆಂದರೆ ಬಿಂಬ ಪ್ರತಿಬಿಂಬಗಳಿಗೆ ಲೋಕದಲ್ಲಿ ಸಾಮ್ಯವಿದೆ. ಆದ್ದರಿಂದ ಬಿಂಬನಾದ ಭಗವಂತನು ಹೇಗೆ ಅಚ್ಛೇದ್ಯ ಅಭೇದ್ಯನೋ ಅದೇ ರೀತಿ ಪ್ರತಿಬಿಂಬನಾದ ಜೀವನು ಕೂಡ ಅಚ್ಛೇದ್ಯ ಅಭೇದ್ಯನಾಗಿದ್ದಾನೆ. ಇಲ್ಲಿ ಜೀವ ಬ್ರಹ್ಮನಿಗೆ ಅಭೇದವನ್ನು ಹೇಳಿದ ಹಾಗೇ ಆಯಿತು ಎಂಬ ಪ್ರಶ್ನೆ ಬರಬಹುದು. ಆದರೆ ಬಿಂಬ ಪ್ರತಿಬಿಂಬಗಳಿಗೆ ಸಾಮ್ಯ ಎಂದರೆ ಎಲ್ಲ ವಿಷಯಗಳಲ್ಲಿ ನಾವು ಸಾಮ್ಯವನ್ನು ತಿಳಿದುಕೊಳ್ಳಬಾರದು ಶಾಸ್ತ್ರ ಅವಿರುದ್ಧವಾದ ವಿಷಯದಲ್ಲಿ ಮಾತ್ರ ಬಿಂಬ ಪ್ರತಿಬಿಂಬ ಸಾಮ್ಯವನ್ನು ತಿಳಿದುಕೊಳ್ಳಬೇಕೇ ಹೊರತು ಶಾಸ್ತ್ರ ವಿರುದ್ಧ ವಿಷಯದಲ್ಲಿ ಅಲ್ಲ ಎಂದು ಶ್ರೀಕೃಷ್ಣನು ಸಮಾಧಾನವನ್ನು ಹೇಳುತ್ತಾನೆ.

ಪರಮಾತ್ಮನಂತೆ ಜೀವನು ಅಚ್ಛೇದ್ಯ ಅಭೇದ್ಯನಾದರೆ ಪರಮಾತ್ಮನಲ್ಲಿ ಜೀವನಿಗಿಂತ ವಿಶೇಷವೇನಿದೆ? ಎಂಬುದಾಗಿ ಅರ್ಜುನನು ತನ್ನ ಸಂಶಯವನ್ನು ವ್ಯಕ್ತಪಡಿಸುತ್ತಾನೆ. ಪರಮಾತ್ಮನು ಸರ್ವತ್ರ ವ್ಯಾಪ್ತನು. ಜೀವನು ಅಣು. ಈ ಅಣುವಾದ ಜೀವನು ಸರ್ವತ್ರವ್ಯಾಪ್ತನಾದ ಪರಮಾತ್ಮನನ್ನು ಆಶ್ರಯಿಸಿಕೊಂಡು ಸದಾ ಅವನ ಅಧೀನನಾಗಿಯೇ ಇರುತ್ತಾನೆ. ಜೀವನಿಗೆ ಪರಮಾತ್ಮನು ಆಧಾರನಾಗಿದ್ದಾನೆ. ನಮಗೆ ಆಧಾರವಾದ ಈ ಪೃಥ್ವಿಯು ಕಾಣುವಂತೆ ಜೀವನಿಗೆ ಆಧಾರವಾದ ಪರಮಾತ್ಮನು ಯಾಕೆ ಕಾಣುವುದಿಲ್ಲ ಎಂಬ ಶಂಕೆ ಬರಬಹುದು. ಆದರೆ ಪರಮಾತ್ಮನು ತನ್ನ ಅಚಿಂತ್ಯಶಕ್ತಿಯಿಂದ ಕಾಣಿಸಿಕೊಳ್ಳುವುದಿಲ್ಲ. ಅವ್ಯಕ್ತ ಸ್ವಭಾವದೇಹವುಳ್ಳವನಾದರೂ ತನಗೆ ಇಚ್ಛೆ ಬಂದರೆ ತನ್ನ ಅಚಿಂತ್ಯ ಶಕ್ತಿಯಿಂದ ತನ್ನ ಭಕ್ತನಿಗೆ ಕಾಣಿಸಿಕೊಳ್ಳುತ್ತಾನೆ. ಈ ಪ್ರಕಾರವಾಗಿ ಜೀವ ಬ್ರಹ್ಮರ ವಿಚಾರವನ್ನು ತಿಳಿದುಕೊಂಡು ಜೀವರಿಗೆ ನಾಶವಿಲ್ಲವೆಂದು ದೃಢಮಾಡಿಕೊಂಡು ನೀನು, ಸ್ವಹಿತಕರ್ಮವಾದ ಯುದ್ಧದಲ್ಲಿ ತೊಡಗಿದರೆ ದುಃಖಹೊಂದಲು ಸಾಧ್ಯವಿಲ್ಲ ಎಂಬುದಾಗಿ ಶ್ರೀಕೃಷ್ಣನು ಉಪದೇಶವನ್ನು ಮಾಡಿದನು. **(ಸಶೇಷ)**

# ವಿದುರನೀತಿ

-ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರು ಮಠ ಬರಹ:ಕೃಷ್ಣಾ

ವಿದುರನು ಧರ್ಮೋಪದೇಶ ನಿಷಿದ್ಧವಿರುವ ಹತ್ತು ರೀತಿಯ ಜನರ ಬಗ್ಗೆ ಹೇಳುತ್ತಾನೆ. ಮತ್ತ, ಪ್ರಮತ್ತ, ಉನ್ಮತ್ತ, ಶ್ರಾಂತ, ಕ್ರುದ್ಧ, ಬುಭುಕ್ಷಿತ, ತ್ವರಾವಾನ್, ಲುಬ್ಧ, ಭೀತ, ಕಾಮಿ. ಸುರಾಪಾನ ಮಾಡಿರುವಂತಹ ವ್ಯಕ್ತಿಯ ಮುಂದೆ ಧರ್ಮೋಪದೇಶ ಮಾಡಬೇಡ. ಮಾನಸಿಕ ಚಿಂತೆಯನ್ನು ತುಂಬಿಸಿಕೊಂಡಿರುವವನು, ಹುಚ್ಚ, ಏಕಾದಶಿ ಅಥವಾ ಪ್ರಯಾಣ ಅಥವಾ ಮನೆಯಲ್ಲಿ ಯಾವುದಾದರು ಕೆಲಸದಿಂದ ದಣಿದಂತಹ ವ್ಯಕ್ತಿಗೆ ಉಪದೇಶ ಮಾಡಬಾರದು. ಇನ್ನು ಸಿಟ್ಟಿಗೆದ್ದವ, ಹಸಿದಿರತಕ್ಕಂತಹ, ಜಿಪುಣ, ಅವಸರದಲ್ಲಿರುವವನಿಗೆ, ಲೋಭಿಗೆ, ಹೆದರಿದವನಿಗೆ ಹಾಗೂ ನಾನಾ ರೀತಿಯ ಕಾಮನೆಯನ್ನು ಹೊತ್ತು ಪ್ರಾಯಕ್ಕೆ ಬಂದಿರುವವನಿಗೆ ಉಪದೇಶ ಮಾಡಬೇಡ ಎಂದು ವೇದವ್ಯಾಸರ ವಾಕ್ಯವನ್ನು  ಮೆಲುಕುಹಾಕುತ್ತಾನೆ. ಧೃತರಾಷ್ಟ್ರ! ಈ ರೀತಿ ನೋಡಿದರೆ, ನಾನು ನಿನಗೆ ಉಪದೇಶ ಮಾಡಬಾರದು. ಯಾಕೆಂದರೆ ನೀನು ಪ್ರಮತ್ತ. ಉಪದೇಶ ಮಾಡು ಎಂದು ಎದುರು ಕೂತಿದ್ದರೂ, ಮನಸ್ಸಿನಲ್ಲಿ ನಿದ್ದೆ ಬರುತ್ತಿಲ್ಲವೆಂಬ ಚಿಂತೆ ಕಾಡುತ್ತಿದೆ. ಆ ನಿದ್ದೆ ಬರಿಸುವುದಕ್ಕೋಸ್ಕರ ಉಪದೇಶ ಮಾಡು ಎನ್ನುತ್ತಿರುವೆ. ಇಂತವರಿಗೆ ಉಪದೇಶ ಮಾಡತಕ್ಕದಲ್ಲ. ಆದರೂ ಅರ್ಜುನನ್ನು ನಿಮಿತ್ತವಾಗಿ ಇಟ್ಟುಕೊಂಡು ಭಗವದ್ಗೀತೆ ಸಮಾಜಕ್ಕೆ ಬಂದಂತೆ ನಿನ್ನ ಮೂಲಕ ಅಪ್ಪ ವೇದವ್ಯಾಸರು ನನ್ನ ಬಾಯಲ್ಲಿ ಸಮಾಜಕ್ಕೆ ತಿಳಿಸುತ್ತಿದ್ದಾರೆ ಎಂದು ವಿದುರನು ನುಡಿಯುತ್ತಾನೆ.

ಒಂದು ದೇಶದಲ್ಲಿ ಶಾಂತಿ-ಕ್ಷೇಮ ಇರದಿರುವಿಕೆಗೆ  ಬ್ರಾಹ್ಮಣನ ಮೇಲೆ ಆಗುವ ದೌರ್ಜನ್ಯ ಕಾರಣ ಎಂದು ವಿದುರನು ಹೇಳುತ್ತಾನೆ. ಬಾಲ್ಯದಿಂದ ಜಪ, ದೇವರ ಪೂಜಾರಾಧನೆಯನ್ನು ವಿಧಿವತ್ತಾಗಿ ಮಾಡಿಕೊಂಡು, ದೇವರ ಜ್ಞಾನ ಸಂಪಾದನೆ ಮಾಡುವವನೇ ಬ್ರಾಹ್ಮಣ. ಇಂತಹ ಬ್ರಾಹ್ಮಣನಿಗೆ ಸಂಬಂಧಪಟ್ಟ ಎಂಟು ಕೆಟ್ಟದನ್ನು ಮಾಡುವ ವ್ಯಕ್ತಿ ಯಾವ ದೇಶದಲ್ಲಿ ಇರುತ್ತಾನೋ, ಆ ದೇಶದಲ್ಲಿ ದೊಂಬಿ ಗಲಾಟೆಗಳು ಸಹಜ ಎಂದು ವಿದುರನು ವಿವರಿಸುತ್ತಾನೆ. **'ಬ್ರಾಹ್ಮಣಾನ್ ದ್ವೇಷ್ಟಿ ಬ್ರಾಹ್ಮಣೈಶ್ಚ ವಿರುಧ್ಯತೆ, ಬ್ರಾಹ್ಮಣಸ್ವಾನಿ ಆದತ್ತೆ'** ಬ್ರಾಹ್ಮಣರಲ್ಲಿ ದ್ವೇಷ ಕಟ್ಟಿಕೊಳ್ಳುವುದು, ಅವರ

ಕಾರ್ಯದಲ್ಲಿ ಅಡ್ಡಿ ಮಾಡುವುದು, ಅವರ ಆಸ್ತಿಯನ್ನು ಕಬಳಿಸುವುದು. ಅವರ ವಿನಂತಿಯನ್ನು ತಿರಸ್ಕರಿಸುವುದು, ಅವರ ಒಳ್ಳೆತನ ಸಹನೆಯಾಗದಿರುವುದು, ಅವರನ್ನು ಬೈದು ಸಂತೋಷಪಡುವುದು, ಅವರಿಂದ ಉಪಕೃತರಾಗಿ ಅವರನ್ನು ಮರೆಯುವುದು, ಅವರನ್ನು ಕೊಲ್ಲಲು ಅಪೇಕ್ಷಿಸುವುದು, ಇವೆಲ್ಲವನ್ನೂ ಬ್ರಾಹ್ಮಣ ವಿರೋಧ ಮಾಡುವುದು ಎಂದು ಕರೆಯುತ್ತಾರೆ. ಈಗಿನ ಸಮಾಜದಲ್ಲಿ ಇಂತಹ ವಿರೋಧಗಳನ್ನು ಕಾಣಬಹುದು.

ಇನ್ನು ವಿದುರನು ಶರೀರದ ಮೇಲಿರುವ ಮಮತೆ ಕಳೆಯಲು ಹೇಳುತ್ತಾನೆ. **'ನವದ್ವಾರಂ ತ್ರಿಸ್ಥೂಣಂ, ಪಂಚ ಸಾಕ್ಷಿಕಂ ಕ್ಷೇತ್ರಜ್ಞಅಧಿಷ್ಠಿತಂ ವಿದ್ಧಿ ಶೀರ್ಯತೆ ಇತಿ ಶರೀರಂ'** ಹೇಳದೆ ಕೇಳದೆ ಒಂದು ದಿವಸ ಹೋಗುತ್ತದೆ ಈ ಶರೀರ. ಈ ಶರೀರ ವಾತ, ಪಿತ್ತ, ಕಫವೆಂಬ ಮೂರು ಕಂಭಗಳ ಮೇಲೆ ನಿಂತಿದೆ. ಇವುಗಳು ಒಂದೇ ಹಂತದಲ್ಲಿ ಇರಬಾರದು. ಹಾಗಾದರೆ ಏರು ಪೇರಾಗಿ ಮೂರು ಕಂಭಗಳ ಮೇಲೆ ನಿಂತಿರುವ ಸೋರುತ್ತಿರುವ ಬಾಗಿಲುಗಳಿಂದ ಕೂಡಿರತಕ್ಕಂತಹ ಈ ಮನೆಯ ಮೇಲೆ ಮಮತೆ ಇರಬಾರದು. ಧೃತರಾಷ್ಟ್ರ! ಈ ಮನೆಯನ್ನು ಬೆಳೆಸುವುದಕ್ಕೋಸ್ಕರ ನಿನಗಿಂತ ಬಲಿಷ್ಠರಾದ ಪಾಂಡವರ ಮೇಲೆ ದ್ವೇಷ ಕಟ್ಟಿಕೊಂಡು ಅವರ ಸಂಪತ್ತನ್ನು ಕೂಡಿ ಹಾಕಿರುವಿ. ಈ ಶರೀರ ನಾಳೆಯ ದಿನದಂದು ಹೋಗುವಾಗ ಕೂಡಿ ಹಾಕಿದ ಸಂಪತ್ತು ಬರುವುದಿಲ್ಲ ಎಂಬ ಚಿಂತನೆ ನಿನಗಿರಲಿ ಎಂದು ಧೃತರಾಷ್ಟ್ರನ ಮೂಲಕ ಸಮಾಜಕ್ಕೆ ವಿದುರನು ಎಚ್ಚರಿಕೆ ಕೊಡುತ್ತಾನೆ.

ಮುಂದೆ ವಿದುರನು ಹೊಗಳುವಿಕೆಯ ಕುರಿತಾಗಿ ಧೃತರಾಷ್ಟ್ರನ ಮೂಲಕ ಸಮಾಜವನ್ನು ತಿದ್ದಲು ತೊಡಗುತ್ತಾನೆ. ಸಿಕ್ಕಿದವರನ್ನೆಲ್ಲ ಸುಮ್ಮನೆ ಎಲ್ಲಾ ಸಂದರ್ಭಗಳಲ್ಲಿ ಹೊಗಳಬಾರದು. ಅದಕ್ಕೊಂದು ಸಮಯ, ಜಾಗವೆಂಬುದು ನೋಡಿಕೊಳ್ಳಬೇಕು.

**ಜೀರ್ಣಂ ಅನ್ನಂ ಪ್ರಶಂಸಂತಿ ಭಾರ್ಯಾಂಚ ಗತ ಯೌವನಾಂ।**
**ಶೂರಂ ವಿಗತ ಸಂಗ್ರಾಮಂ ಗತಪಾರಂ ತಪಸ್ವಿನಂ ॥**

ಇಲ್ಲಿ ನಾಲ್ಕು ಸಂದರ್ಭಗಳಲ್ಲಿ ನಾಲ್ಕು ರೀತಿಯ ಜನರ ಪ್ರಶಂಸೆ ಮಾಡುವ ಕ್ರಮವನ್ನು ಕೊಟ್ಟಿರುತ್ತಾರೆ. ಮೊದಲನೆಯದಾಗಿ, ಊಟ ಆದ ತಕ್ಷಣ ಯಜಮಾನನ ಹತ್ತಿರ ಊಟದ ಕುರಿತು ಹೊಗಳಬೇಡ. ಉಂಡ ಊಟ ಹೊಟ್ಟೆಗೆ ಹಿಡಿದ ನಂತರವೇ ಊಟ ಚೆನ್ನಾಗಿತ್ತು ಎಂದು ಹೇಳು ಇದು ತಾರ್ಕಿಕ ಅರ್ಥ. ಆಧ್ಯಾತ್ಮಿಕವಾಗಿ ವಿಚಾರ ಮಾಡಿದರೆ -**'ಯಜ್ಞಾಂತಕೃತ್ ಯಜ್ಞಗುಹ್ಯಂ ಅನ್ನಂ ಅನ್ನಾದ ಏವಚ'** ಎಂದು ವಿಷ್ಣು ಸಹಸ್ರನಾಮವು 'ಅನ್ನಂ' ಎಂಬ ಶಬ್ದದಿಂದ ಭಗವಂತನನ್ನು ಹೇಳುತ್ತದೆ. 'ಅನ್ನ' ಶಬ್ದಕ್ಕೆ ಭಗವತ್ ವಿಷಯ

ಎಂದರ್ಥ. ಇಲ್ಲಿ ಜೀರ್ಣ ಆಗುವುದೆಂದರೆ ಹೇಳಿದ ವಿಷಯ ಅರ್ಥವಾಗಿ ನಮ್ಮ ಅನುಭವಕ್ಕೆ ಬರುವುದು. ಆಚಾರ್ಯ ಮಧ್ವರು ಸಮಾಜಕ್ಕೆ ಕೊಟ್ಟ ಮೊದಲಿನ ವಿಷಯ ಏನೆಂದರೆ ನಾನು ಹೇಳಿರತಕ್ಕಂತಹ ವಿಷಯ ನಿನ್ನ ಅನುಭವಕ್ಕೆ ಬರುತ್ತದೆಯೋ? ಅದನ್ನು ತೆಗೆದುಕೋ, ಬಾರದಿದ್ದರೆ ಬಿಟ್ಟು ಬಿಡು ಎಂದರು. ಅಭಿಪ್ರಾಯವೇನೆಂದರೆ ಆನಂದತೀರ್ಥರು ಪ್ರತಿಯೊಬ್ಬನಿಗೆ ಅನುಭವಕ್ಕೆ ಬರುವ ಮಾತನ್ನೇ ಕೊಡುತ್ತಿದ್ದರು. ಆದರೂ ಅನುಭವಕ್ಕೆ ತೆಗೆದುಕೊಳ್ಳಲಾಗುತ್ತಿಲ್ಲವೆಂದರೆ ಅವನಿಗೆ ಒಳಗೆ ಸಾಕ್ಷಿ ಇಲ್ಲವೆಂದರ್ಥ. ಎರಡನೆಯದಾಗಿ ಪತ್ನಿಯನ್ನು 'ಮಹಾಪತಿವ್ರತೆ' ಎಂದು ಅವಳ ತಾರುಣ್ಯ ಕಳೆದ ಅವಸ್ಥೆಯಲ್ಲಿ ಹೊಗಳುವಂತಾಗಬೇಕು. ಅಂದರೆ ಅವಳು ಅವಳ ಮನೆ, ಮನೆಯವರ ಬಗ್ಗೆ ಚಿಂತನೆ ಮಾಡಿಕೊಂಡು ಇದ್ದಿರಬೇಕು. ಅಲ್ಲದೆ ಇನ್ನೊಬ್ಬರ ಚಿಂತನೆ ಮಾಡಿಕೊಂಡಿರಬಾರದು. ಇನ್ನು ಯೋಧರನ್ನು ಯುದ್ಧ ಮುಗಿದ ಮೇಲೆಯೇ ಹೊಗಳಬೇಕಂತೆ. ಇಲ್ಲವಾದರೆ ಸಿಗಬೇಕಾದ ಅತಿಥ್ಯ ಮೊದಲೇ ಸಿಕ್ಕಿ ಬಿಟ್ಟಿತೆಂದು ಆಲಸ್ಯ ತೋರಿಸುವ ಪ್ರಸಂಗ ಬರಬಹುದು. ಹಾಗೆಯೇ ಮಕ್ಕಳನ್ನು ಪರೀಕ್ಷೆಗೆ ಹೋಗುವ ಮುನ್ನವೆ ಬೆನ್ನು ತಟ್ಟದೆ, ಅಂಕ ಪಡೆದ ಮೇಲೆ ಹೊಗಳುವಂತಾಗಬೇಕು. ಕೊನೆಯಲ್ಲಿ ಒಬ್ಬ ತಪಸ್ವಿಯು ತಾನು ಜಪ, ಸಾಧನಾನುಷ್ಠಾನಗಳನ್ನು ಮಾಡಿ, ಬಹಳಷ್ಟು ಜನರಿಗೆ ಒಳ್ಳೆಯದಾಗಲೆಂದಾಗ ಒಬ್ಬಿಬ್ಬರಿಗಾದರೂ ಒಳ್ಳೆಯದಾದರೆ, ಅವನು ಜಪದಲ್ಲಿ ಒಂದು ದಡವನ್ನು ತಲುಪಿದನೆಂದರ್ಥ. ಅಂಥವರನ್ನು ನಾವು ಆದರ ಸತ್ಕಾರ ಮಾಡಬೇಕು ಎಂದು ವಿದುರನು ನುಡಿದನು. ★


**ನಿರಂತರ ಜ್ಞಾನಪ್ರಸಾರ ನಿಮ್ಮ ಮನೆ-ಮನಕೆ**

ಶ್ರೀಪಾದರ ಪ್ರವಚನವು ಯಾವುದೇ ಊರಿನಲ್ಲಿ ನಡೆಯುತ್ತಿದ್ದರೂ ನಿಮ್ಮ ಮನೆಯಲ್ಲಿಯೇ ನೇರಪ್ರಸಾರವನ್ನು ಶ್ರೀ ಮಠದ ಅಂತರ್ಜಾಲತಾಣಗಳಲ್ಲಿ ವೀಕ್ಷಿಸಬಹುದು.

**www.livepravachana.com**

**www.palimarumatha.org**

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ಇಗನೇಚಾತುರ್ಮಾಸ್ಯದಲ್ಲಿ ನಡೆದ ಪ್ರವಚನಗಳು ಹಾಗೂ ಇನ್ನಿತರ ಪ್ರವಚನಗಳು ಉಚಿತವಾಗಿ ಇದೇ ಅಂತರ್ಜಾಲತಾಣದಲ್ಲಿ ಲಭ್ಯವಿದೆ. ಮಾಧ್ವಬಂಧುಗಳು ಇದರ ಉಪಯೋಗವನ್ನು ಪಡೆಯಬಹುದು.

# ತೈತ್ತಿರೀಯೋಪನಿಷತ್

ಬರಹ: ವೆಂಕಟರಮಣ ಆಚಾರ್ಯ, ಉಡುಪಿ

ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ

ಭೂಮಿಯ ಬೆಳಕಾದ ಅಗ್ನಿಯೇ ಪೂರ್ವರೂಪ. ಬೆಳಗಾದರೆ ಸೂರ್ಯ ಅಗ್ನಿಯ ಶಕ್ತಿಯನ್ನು ಎಳೆದುಕೊಳ್ಳುತ್ತಾನೆ. ಸಾಯಂಕಾಲ ಆಗುವಾಗ ಅದೇ ಅಗ್ನಿ ಸೂರ್ಯನಿಂದ ಶಕ್ತಿಯನ್ನು ಎಳೆದುಕೊಂಡು ಬೆಳಗುತ್ತದೆ. ಈ ಬೆಳಕಿನಲ್ಲಿ ಸೂರ್ಯನೇ ಉತ್ತರರೂಪ. ಅಗ್ನಿ ಮತ್ತು ಆದಿತ್ಯರಿಗೆ ಜೋಡಿಸುವ ನೀರೇ ಸಂಧಿ. ಬೆಂಕಿ ಮತ್ತು ಸೂರ್ಯನನ್ನು ನೀರು ಜೋಡಿಸುವುದು ಹೇಗೆ? ಭೂಮಿಯ ಅಗ್ನಿಯ ಬಿಸಿಗೆ ನೀರು ಆವಿಯಾಗಿ ಹವೆಯಲ್ಲಿ ಸೇರಿ ಮೇಲಕ್ಕೆ ಹೋಗುತ್ತದೆ. ಅಲ್ಲಿಂದ ಆ ಆವಿ ಸೂರ್ಯನಿಂದ ಮೇಘರೂಪವನ್ನು ತಾಳಿ ನಂತರ ಮಳೆಯ ರೂಪದಲ್ಲಿ ಭೂಮಿಗೆ ಬಂದು ಸೇರುತ್ತದೆ. ಇದೇ ರೀತಿಯ ಕ್ರಮವನ್ನು ಮನುಸ್ಮೃತಿಯಲ್ಲಿಯೂ ಹೇಳಿದೆ. ಹೋಮ ಮಾಡುವಾಗ ಅಗ್ನಿಯಲ್ಲಿ ಹಾಕಿದ ಆಹುತಿ ಆವಿಯಾಗಿ ಅದು ಕಣ್ಣಿಗೆ ಕಾಣದೆ ಮೇಲೆ ಹೋಗಿ ಸೂರ್ಯಮಂಡಲವನ್ನು ಸೇರಿ ನಂತರ ಮಳೆಯ ರೂಪದಲ್ಲಿ ಭೂಮಿಗೆ ಬಿದ್ದು ಆ ನೀರೇ ಅನ್ನದಲ್ಲಿ ಸೇರಿ, ಮನುಷ್ಯನ ದೇಹ ಸೇರಿ, ಮನುಷ್ಯನ ಬೆಳವಣಿಗೆಗೆ ಕಾರಣವಾಗುತ್ತದೆ. ಹೀಗೆ ನೀರೇ ಸೂರ್ಯ ಹಾಗೂ ಅಗ್ನಿಗಳಿಗೆ ಸಂಧಿಯಾಗಿದೆ. ಈ ಸಂಧಿಯಿಂದ ಉಂಟಾಗುವ ಮಿಂಚಿನ ಬೆಳಕೇ ಸಂಧಾನ. ಅಗ್ನಿ-ಸೂರ್ಯ, ಮೇಘಮಂಡಲ, ಮಿಂಚಿನ ಬೆಳಕು ಇವೆಲ್ಲ ಬೆಳಕಿನ ಒಂದು ಮಹಾಕಾವ್ಯದ ಘಟಕಗಳು.

ಈ ವಿಶ್ವದಲ್ಲಿ ಜ್ಞಾನವೇ ಒಂದು ಸುಂದರವಾದ ಮಹಾಕಾವ್ಯ. ಇದರಲ್ಲಿ ಗುರುವೇ ಪೂರ್ವರೂಪ. ಶಿಷ್ಯನೇ ಉತ್ತರರೂಪ. ಗುರುಶಿಷ್ಯರು ಸಂಧಿಸುವದು ವಿದ್ಯೆಯಿಂದ. ಆದ್ದರಿಂದ ವಿದ್ಯೆಯೇ ಸಂಧಿ. ಗುರುವಿಗೆ ತಾನು ತಿಳಿದುದ್ದನ್ನು ಹೇಳುವ ತೃಷೆ. ಶಿಷ್ಯನಿಗೆ ತನಗೆ ಯಾರು ವಿದ್ಯೆಯನ್ನು ಹೇಳಿಕೊಡುತ್ತಾರೆ, ಯಾರಿಂದ ವಿದ್ಯೆಯನ್ನು ಕಲಿಯಬೇಕೆಂಬ ತೃಷೆ, ಈ ತೃಷೆ ಇಲ್ಲದಿರುತ್ತಿದ್ದರೆ ಶಿಷ್ಯ ಗುರುವಿನಲ್ಲಿ ಬರುತ್ತಿರಲಿಲ್ಲ. ಅಥವಾ ಗುರು ಶಿಷ್ಯನನ್ನು ಹುಡುಕಿಕೊಂಡು ಹೋಗುತ್ತಿರಲಿಲ್ಲ. ವಿದ್ಯೆಯ ಪ್ರವಚನವೇ ಸಂಧಾನ. ಇದೇ ಜ್ಞಾನಮಯ ಮಹಾಕಾವ್ಯ.

ನಾಲ್ಕನೇದ್ದಾಗಿ ಸಂಸಾರದ ಸೃಷ್ಟಿಯೇ ಒಂದು ಸುಂದರವಾದ ಮಹಾಕಾವ್ಯ. ತಂದೆ, ತಾಯಿ, ಗಂಡ,ಹೆಂಡತಿ,ಮಕ್ಕಳು, ಮೊಮ್ಮಕ್ಕಳು, ಅಜ್ಜ, ಅಜ್ಜಿ, ಮರಿಮಕ್ಕಳು ಹೀಗೆ ನಿರಂತರವಾಗಿ ನಡೆಯುವ ಸಂಸಾರವು ಭಗವಂತ ನಿರ್ಮಿಸಿದ ಒಂದು ಸುಂದರವಾದ ಮಹಾಕಾವ್ಯ.

ಸಂಸಾರದಲ್ಲಿರುವ ತಾಯಿಯೇ ಪೂರ್ವರೂಪ. ತಂದೆಯೇ ಉತ್ತರರೂಪ. ಇವರಿಬ್ಬರ ಸಮಾಗಮದಿಂದ ಬೆಳೆಯುವ ಗರ್ಭವೇ ಸಂಧಿ. ಒಂಭತ್ತು ತಿಂಗಳ ಪ್ರಸವದ ನಂತರ ಬರುವ ಮಗುವೇ ಸಂಧಾನ. ಎಲ್ಲಿಯೋ, ಹೇಗೋ ಬೆಳೆದ ಗಂಡು ಎಲ್ಲಿಯೋ ಇದ್ದ ಹುಡುಗಿಯನ್ನು ಪ್ರೇಮಿಸಿ ಮದುವೆಯಾಗಿ ನಿರಂತರವಾಗಿ ನಡೆಯುತ್ತಿರುವ ಈ ಸಂಸಾರವೇ ಒಂದು ಬಹುಚೊಕ್ಕವಾದ ಮಹಾಕಾವ್ಯ.

ಐದನೇಯದ್ದಾಗಿ ಪ್ರಪಂಚದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಒಂದು ಮಹಾಕಾವ್ಯ. ಪ್ರತಿಯೊಬ್ಬ ಮನುಷ್ಯನಿಗೆ ಮಾತು ಎನ್ನುವದನ್ನು ಭಗವಂತ ಕೊಟ್ಟಿದ್ದಾನೆ. ಮನುಷ್ಯ ಮಾತಾಡುವದೇ ಒಂದು ವಿಸ್ಮಯ. ಪ್ರಾಣಿಗಳಿಗೆ ಈ ಭಾಗ್ಯವೇ ಇಲ್ಲ. ಚಿಕ್ಕ ಮಗುವಾಗಿರುವಾಗ ತೊದಲು ತೊದಲಾಗಿ, ತಪ್ಪು ತಪ್ಪಾಗಿ ಮಾತಾಡುವುದು ಕೇಳುವದೇ ಒಂದು ರೀತಿಯ ಸಂತೋಷ. ಮಾತಾಡುವದೇ ಒಂದು ಮಹಾಕಾವ್ಯ. ಇದರಲ್ಲಿ ಕೆಳದವಡೆಯೇ ಪೂರ್ವರೂಪ. ಮೇಲ್ದವಡೆಯೇ ಉತ್ತರರೂಪ. ಮಾತೇ ಸಂಧಿ. ನಾಲಿಗೆಯೇ ಸಂಧಾನ. ಇದೇ ಒಂದು ಸುಂದರವಾದ ಮಹಾಕಾವ್ಯ. ಇದು ಅಧ್ಯಾತ್ಮಕಾವ್ಯ. ಇದನ್ನು ಪ್ರಪಂಚದಲ್ಲಿ ಕಾಣಲಿಕ್ಕೆ ಸಾಧ್ಯ ಉಂಟು.

ಇಷ್ಟು ಹೇಳಿದ ನಂತರ 'ಇತಿ ಮಹಾಸಂಹಿತಾ' ಎಂದು ಹೇಳಿದರು. ಇಷ್ಟು ವಿವರಣೆ ಹೇಳಿದ ಮೇಲೆ ಇವೇ ಐದು ಮಹಾ ಸಂಹಿತೆಗಳು ಎಂದು ಹೇಳಿದರು. ಇವು ಐದು ಮಹಾ ಅಧಿಕರಣಗಳು. ಮೊದಲು ಆ ಮಹಾ ಸಂಹಿತೆಗಳು ಎಂದು ಹೇಳಿದ್ದರು. ಏಕೆಂದರೆ ಅದರ ಬಗ್ಗೆ ಆಗ ಗೊತ್ತಿರಲಿಲ್ಲ. ಈಗ ಅದನ್ನು ವಿವರಿಸಿದ ನಂತರ ಈ ಮಹಾಸಂಹಿತೆಗಳು ಎಂದು ಹೇಳಿದರು. ಹೀಗೆ ಈ ಮಹಾಸಂಹಿತೆಗಳನ್ನು ತಿಳಿದುಕೊಳ್ಳುವದರಿಂದ ಏನು ಫಲ? ಫಲ ಇಲ್ಲದಿದ್ದರೆ ಏಕೆ ತಿಳಿದುಕೊಳ್ಳಬೇಕು ಎಂಬ ಪ್ರಶ್ನೆ ಬರುವದು ಸಹಜ. ಇದಕ್ಕೆ ಫಲವನ್ನು ಈ ಉಪನಿಷತ್ತೇ ಹೇಳುತ್ತದೆ. ಇಷ್ಟರವರೆಗೆ ಈ ಮಂತ್ರದ ಕೇವಲ ಲೌಕಿಕ ಮುಖವನ್ನು ಮಾತ್ರ ವಿಶ್ಲೇಷಿಸಿದ್ದು. ಅದರ ಲೌಕಿಕ ಫಲವನ್ನು ಮುಂದಿನ ಮಂತ್ರ ಹೇಳುತ್ತದೆ.

**ಯ ಏವಮೇತಾ ಮಹಾಸಗ್ಂಹಿತಾ ವ್ಯಾಖ್ಯಾತಾ ವೇದ ।**
**ಸಂಧೀಯತೇ ಪ್ರಜಯಾ ಪಶುಭಿಃ ।**
**ಬ್ರಹ್ಮವರ್ಚಸೇನಾನ್ನಾದ್ಯೇನ ಸುವರ್ಗ್ಯೇಣ ಲೋಕೇನ ॥**

*

# ಶ್ರೀಹರಿಭಕ್ತಿಸಾರ

-ವಿ || ಹಯವದನ ಪುರಾಣಿಕ, ತಿರುಪತಿ

ದಂಡಧರನುಪಟಳದಿ ಮಿಗೆ ಮುಂ
ಕೊಂಡು ಮೊರೆ ಹೋಗುವವರ ಕಾಣೆನು
ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸಿದ ।
ಖಂಡಪರಶುವು ರುದ್ರಭೂಮಿಯೊ
ಳಂಡಲೆದು ತಿರುಗುವನು ನೀನು
ದ್ದಂಡ ದೇವರ ದೇವ ರಕ್ಷಿಸು ನಮ್ಮನನವರತ »72»

ಯಮನ ಬಾಧೆಗೊಳಗಾಗಿ ನಾ ಮುಂದು ತಾ ಮುಂದೆಂದು ಧಾವಿಸುತ್ತ ನಿನ್ನ ಬಳಿಗೆ ಬಂದು ಮೊರೆ ಹೋಗುವವರನ್ನು ನಾನು ನನ್ನ ರಕ್ಷಣೆಗಾಗಿ ಸಂದರ್ಶಿಸಲಾರೆ. ಬ್ರಹ್ಮರುದ್ರರು ಯಮನ ಬಾಧೆ ಇಲ್ಲದವರು ನಿಜ. ಆದರೆ ಬ್ರಹ್ಮನ ಒಂದು ತಲೆಯನ್ನು ರುದ್ರ ತುಂಡರಿಸಿದ. ಆ ರುದ್ರನಾದರೂ ಸ್ಮಶಾನದಲ್ಲಿ ಅಲೆಯುತ್ತ ಕ್ಲೇಶ ಪಡುತ್ತಾನೆ. ಪ್ರಚಂಡ ಮಹಿಮನಾದ ದೇವರದೇವನೆಂದರೆ ನೀನೆ. ನೀನೇ ನಮ್ಮನ್ನು ಸದಾ ಕಾಪಾಡಬೇಕು.

**ದಂಡಧರನುಪಟಳದಿ**

ದಂಡಧರನೆಂದರೆ ಯಮಧರ್ಮರಾಯ. ಅವನ ಆಯುಧ ದಂಡ. ಯಮದಂಡ ಎಂದೇ ಪ್ರಸಿದ್ಧ. ಅದಕ್ಕೆ ತಲೆ ಬಾಗದ ಮಾನವನಿಲ್ಲ. ಮರಣ ಭಯದಿಂದ ಮಾನವರೆಲ್ಲರೂ ತತ್ತರಿಸುತ್ತಾರೆ. ಏಕೆಂದರೆ ಮಾನವರಾರೂ ಸ್ವತಂತ್ರರಲ್ಲ ತಾನೆ? ಅವರು ಯಾವಾಗ ಎಲ್ಲಿ ಹೇಗೆ ಮರಣ ಹೊಂದುತ್ತಾರೆ ಎನ್ನುವುದು ಅವರಿಗೇ ಗೊತ್ತಿರುವುದಿಲ್ಲ. ಯಮನ ಬಾಧೆ ಎಂದರೆ ಹೀಗೆ.

**ಮಿಗೆ ಮುಂಕೊಂಡು ಮೊರೆ ಹೋಗುವವರ ಕಾಣೆನು**

'ಮೊರೆ ಹೋಗದವರ ಕಾಣೆನು' ಎಂದು ಪಾಠವಿರುತ್ತಿದ್ದರೆ ಸರಳವಾಗಿರುತ್ತಿತ್ತು. 'ಮೊರೆ ಹೋಗುವವರ ಕಾಣೆನು' ಎನ್ನುವುದೂ ಸರಿಯೆ. ತಮ್ಮ ರಕ್ಷಣೆಗಾಗಿ ಅನ್ಯರ ಮೊರೆ ಹೋಗುವವರನ್ನು ನಾನು ನನ್ನ ರಕ್ಷಣೆಗಾಗಿ ಸಂದರ್ಶಿಸಲೇಕೆ? ನಾ ಮುಂದು ತಾ ಮುಂದೆಂದು ಮುಂದೆ ಮುಂದೆ ಧಾವಿಸುತ್ತ ತಮ್ಮ ರಕ್ಷಣೆಗಾಗಿ ಅನ್ಯರ ಬಳಿಗೆ ಹೋಗಿ ಬೇಡುವವರೆ, ಎಲ್ಲ

ಮಾನವರು! ಅಂಥವರನ್ನು ನಾನು ಸಂದರ್ಶಿಸಿ ನನ್ನ ಮರಣ ಭಯವನ್ನು ಅವರ ಮುಂದೆ ಹೇಳಿಕೊಂಡೇನು ಪ್ರಯೋಜನ?

**ಪುಂಡರೀಕೋದ್ಭವನ ಶಿರವನು ಕಡಿದು ತುಂಡಿಸಿದ**

'ಪುಂಡರೀಕೋದ್ಭವ' ಎಂದರೆ ಕಮಲದಲ್ಲಿ ಜನಿಸಿದವ. ನಾರಾಯಣನ ನಾಭಿಕಮಲದಲ್ಲಿ ಜನಿಸಿದ ಚತುರ್ಮುಖ ಬ್ರಹ್ಮ. ಅವನು ಮೊದಲಿಗೆ ಪಂಚಮುಖನಾಗಿದ್ದ. ನಾಲ್ಕು ದಿಕ್ಕುಗಳಿಗೆ ನಾಲ್ಕು ಮುಖ ಮತ್ತು ಊರ್ಧ್ವದಿಕ್ಕಿಗೆ ಐದನೆಯದು ಇನ್ನೊಂದು ಮುಖ ಎಂದು. ವೇದ ಮಂತ್ರ ಸ್ವರವನ್ನು ತಪ್ಪಾಗಿ ಉಚ್ಚರಿಸಿದರೆ ಅನರ್ಥವಿದೆ. ಬ್ರಹ್ಮ ಐದನೆ ಮುಖದಲ್ಲಿ ತಪ್ಪಾಗಿ ಉಚ್ಚರಿಸಿದ. ವೇದಾಭಿಮಾನಿನಿ ರಮಾದೇವಿಯ ಆದೇಶದಂತೆ 'ಖಂಡಪರಶು' ಎಂದರೆ ಶಿವ, ಆ ಐದನೆ ತಲೆಯನ್ನು ತುಂಡರಿಸಿದ. ಬ್ರಹ್ಮ ಹೀಗೆ ತನ್ನ ಉದಾಹರಣೆಯಿಂದ, ವೇದೋಚ್ಚಾರಣೆಯಲ್ಲಿ ತಪ್ಪು ಮಾಡುವುದು ಅನರ್ಥಕರವೆಂದು ಲೋಕಕ್ಕೆ ತಿಳಿಸಿದ್ದ. ಅಂತೂ ಬ್ರಹ್ಮ ತನ್ನ ಒಂದು ತಲೆಯನ್ನೇ ಕಳೆದುಕೊಂಡನೆಂದರೆ ಅವನೂ ಸ್ವತಂತ್ರನಲ್ಲ ಎನ್ನುವುದು ಸುಸ್ಪಷ್ಟ.

**ಖಂಡಪರಶುವು ರುದ್ರಭೂಮಿಯೊಳಂಡಲೆದು ತಿರುಗುವನು**

ಬ್ರಹ್ಮನ ಶಿರವನ್ನು ಕಡಿದ ಪ್ರಚಂಡ ಶಿವನಾದರೂ ಸ್ವತಂತ್ರ ಎನ್ನೋಣವೇ? ಅವನೂ ರುದ್ರಭೂಮಿಯಲ್ಲಿ ಅಂದರೆ ಸ್ಮಶಾನದಲ್ಲಿ ಅಲೆಯುತ್ತ ಕ್ಲೇಶಪಡುತ್ತಿದ್ದಾನೆ! ತಾನು ಮೃತ್ಯುಂಜಯನಾಗಿದ್ದರೇನಂತೆ?

**ನೀನುದ್ದಂಡ ದೇವರ ದೇವ, ರಕ್ಷಿಸು ನಮ್ಮನನವರತ**

ಪ್ರಚಂಡ ಮಹಿಮ ನೀನು, ಬ್ರಹ್ಮರುದ್ರರನ್ನೂ ಬ್ರಹ್ಮಲಯ ಕಾಲದಲ್ಲಿ ಸಂಹರಿಸುವವನು. ಸೃಷ್ಟಿ ಕಾಲದಲ್ಲಿ ಸೃಜಿಸುವವನು, ಸ್ವತಂತ್ರ. ಎಲ್ಲ ದೇವರ ದೇವ. ಎಂದೂ ಕ್ಲೇಶ ಪಡುವವನಲ್ಲ. ರಾಮಾವತಾರದಲ್ಲಿ ನೀನೂ ಸೀತಾವಿಯೋಗದಿಂದ ಅತ್ತಿದ್ದು, ಕೊನೆಗೆ ಲೋಕಾಪವಾದ ಭಯದಿಂದ ಸೀತೆಯನ್ನೇ ಪರಿತ್ಯಾಗ ಮಾಡಿದ್ದು ಏಕೆಂದರೆ ಭೃಗುಮುನಿಯ ಶಾಪ ಹಾಗಿತ್ತು. ಮುನಿಶಾಪ ಸುಳ್ಳಾಗುವುದುಂಟೆಂದು ಲೋಕ ಭಾವಿಸಬಾರದು ಎಂಬ ಉದ್ದೇಶದಿಂದ ಹಾಗೆ ನೀನು ನಟಿಸಿದ್ದೆ. ಹೊರತು ನೀನು ನಿಜವಾಗಿ ಶೋಕಪಡಲೇ ಇಲ್ಲ. ಬ್ರಹ್ಮರುದ್ರರ ದೈನ್ಯ ಸ್ಥಿತಿಗಳಿಗೆ ಅಂಥ ವಿಶೇಷ ಕಾರಣವೇನಿಲ್ಲ. ಅಸ್ವಾತಂತ್ರ್ಯವೇ ಕಾರಣ. ಹೀಗಾಗಿ ನೀನೊಬ್ಬನೆ ಸ್ವತಂತ್ರ ಪ್ರಭು. ನಿನ್ನನ್ನೇ ಬೇಡುವೆನು. ಸದಾ ನಮ್ಮನ್ನು ಕಾಪಾಡು ಎಂದು. ★

**ಅವಲೋಕನ**

# ಕರ್ಮಾಚರಣೆಯಿಂದ ಪ್ರೀತಿ ಹೇಗೆ?

**-ವಿ|| ಸಗ್ರಿ ರಾಘವೇಂದ್ರ ಉಪಾಧ್ಯಾಯ**

ಸರಿಯಾದ ಹಿನ್ನಲೆಯನ್ನು ಗುರುತಿಸಿಕೊಳ್ಳದೆ ಕೆಲವು ಧಾರ್ಮಿಕಾಚರಣೆಗಳನ್ನು ಹೇಗೆ ನಡೆಸುವೆವೋ ಅಂತೆಯೇ ಸರಿಯಾದ ಹಿನ್ನಲೆಯ ಪರಿಚಯವಿಲ್ಲದೆ ಧಾರ್ಮಿಕ ಪ್ರಪಂಚದಲ್ಲಿ, ಆಧ್ಯಾತ್ಮಿಕ ಪ್ರಪಂಚದಲ್ಲಿ ಕೆಲವು ವಿಶಿಷ್ಟ ಶಬ್ದಗಳನ್ನೂ ಪ್ರಯೋಗಿಸುವುದುಂಟು. ಅಂತಹ ಶಬ್ದಗಳ ಆಂತರ್ಯದ ಅನ್ವೇಷಣೆಯಲ್ಲಿ ತೊಡೆಗಿದ್ದಾಗಷ್ಟೇ ಅವುಗಳ ಗಾಂಭೀರ್ಯ ಹೊರಹೊಮ್ಮುವುದು.

ಪ್ರತಿಯೊಂದು ಕರ್ಮದ ಸಂಕಲ್ಪದಲ್ಲಿ ಪ್ರಯೋಗಿಸಲಾಗುವ **'ಭಗವತ್ಪ್ರೀತ್ಯರ್ಥಂ'** ಎಂಬ ಶಬ್ದವೂ ಆ ಬಗೆಯದು. ಭಗವಂತನ ಪ್ರೀತಿಯ ಉದ್ದೇಶಕ್ಕಾಗಿ ಎಂದು ಅದರಿಂದ ಹೊರಡುವ ಸರಳ ಅರ್ಥ. ಆದರೆ ಭಗವಂತನ ಸ್ವಭಾವವನ್ನು ಬಲ್ಲವನಿಗೆ ಈ ಅರ್ಥ ಒಪ್ಪಿಗೆಯಾಗಲಾರದು.

**ಎರಡು ಅನುಪಪತ್ತಿಗಳು**

ಭಗವಂತನ ಪ್ರೀತಿಯ ಉದ್ದೇಶಕ್ಕಾಗಿ ಕರ್ಮ ನಡೆಸಲ್ಪಡುವುದೆಂದಾಗ ಎದ್ದು ಕಾಣುವ ಎರಡು ಸಂದೇಹಗಳು.

೧) ಭಕ್ತನ ಜ್ಞಾನ ಭಕ್ತಿ ಮುಂತಾದ ಗುಣಗಳನ್ನು ಪ್ರೀತಿಸುವ ಭಗವಂತ ಕರ್ಮಗಳ ಬಗ್ಗೆ ಪ್ರೀತನಾಗುವುದಾದರೂ ಹೇಗೆ?

೨) ನಿತ್ಯ ಸುಪ್ರೀತನಾಗಿರುವ ಭಗವಂತ ಈ ಕರ್ಮದ ಆಚರಣೆಯಿಂದ ಪುನಃ ಪ್ರೀತನಾಗುವುದಾದರೂ ಹೇಗೆ?

**ಕರ್ಮಾಚರಣೆಯ ಅನುಸಂಧಾನ**

ನಾವು ನಡೆಸುವ ಸಂಧ್ಯಾವಂದನೆ ಮುಂತಾದ ಧಾರ್ಮಿಕ, ಆಧ್ಯಾತ್ಮಿಕ ಕರ್ಮಗಳಿಗಷ್ಟೇ ಅಲ್ಲದೆ, ಸ್ನಾನ, ಭೋಜನ, ಶಯನ ಮುಂತಾದ ನಿತ್ಯದ ಕರ್ಮಗಳಿಗೂ ಭಗವಂತ ಯಾಕೆ ಪ್ರೀತನಾಗುವನು? ಎಂದಾಗ ಆ ಕರ್ಮಗಳ ಹಿನ್ನಲೆಯಾಗಿ ಅಳವಡಿಸಿಕೊಳ್ಳಲಾಗುವ ಭಕ್ತಿ, ಜ್ಞಾನ ಮುಂತಾದ ಗುಣಗಳಿಗಾಗಿ ಭಗವಂತನು ಆಯಾ ಕರ್ಮಗಳನ್ನು ಪ್ರೀತಿಸುವನು ಎಂದು ಸಮಾಧಾನಿಸಲಾಗುವುದು.

ಆದರೆ ಜಿಜ್ಞಾಸೆ ಇಷ್ಟಕ್ಕೇ ಕೊನೆಗೊಳ್ಳುವುದಿಲ್ಲ. ಸಂಧ್ಯಾವಂದನೆಯೇ ಮುಂತಾದ ದೊಡ್ಡ ಕರ್ಮಗಳನ್ನಾಗಲೀ, ಉಸಿರಾಟ ಮುಂತಾದ ಚಿಕ್ಕ ಕರ್ಮಗಳನ್ನಾಗಲೀ ನಡೆಸುವಾಗ ಅವುಗಳಿಗೆ ಭಗವಂತನ ಪೂಜೆಯ ಮೆರುಗು ದೊರಕುವಂತೆ ಯಾವ ವಿಷಯಕಗಳಾದ ಭಕ್ತಿ ಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು? ಕರ್ಮಾಚರಣೆಗೂ ಭಗವಂತನ ಭಕ್ತಿ ಜ್ಞಾನಗಳಿಗೂ ಏನೂ ನಂಟು ಇಲ್ಲದೆ, ಹಾಗೆಯೇ ಕಣ್ಣು ಮುಚ್ಚಿ ಭಕ್ತಿ ಜ್ಞಾನಗಳಿಂದ ಕರ್ಮವನ್ನು ನಡೆಸುವುದೆಂದರೆ ಅದು ಮೂಢಭಕ್ತಿ, ಜ್ಞಾನಾಭಾಸ ಎಂದೇ ಅರ್ಥ. ಅಂತಹ ಭಕ್ತಿ ಜ್ಞಾನಗಳು ಕೆಲವೊಮ್ಮೆ ನಾಯಿಕೊಡೆಯಂತೆ ಕಾಣಿಸಿಕೊಳ್ಳಬಲ್ಲವೇ ಹೊರತು ಶಾಶ್ವತವಾಗಿ ಮರೆಯಲಾರವು. ಆದ್ದರಿಂದ ನಾವು ಆಚರಿಸುತ್ತಿರುವ ಸಂಧ್ಯಾವಂದನೆಯೇ ಮುಂತಾದ ವಿಶಿಷ್ಟಕಾರ್ಯಗಳಲ್ಲೂ, ಕಣ್ಣುರೆಪ್ಪೆ ಅಲ್ಲಾಡಿಸುವುದೇ ಮುಂತಾದ ಚಿಕ್ಕಪುಟ್ಟ ಕಾರ್ಯಗಳಲ್ಲೂ ಭಗವಂತನ ಪಾತ್ರವನ್ನು ವಿಶ್ಲೇಷಿಸಿಕೊಂಡು ಅಂತಹ ವಿಶ್ಲೇಷಣಪೂರ್ವಕವಾಗಿ ಪ್ರಾದುರ್ಭವಿಸಿದ ಜ್ಞಾನಭಕ್ತಿಗಳಿಂದ ಆಯಾ ಕಾರ್ಯವನ್ನು ಅವನ ಪೂಜೆಯಾಗಿ ನಡೆಸಬಹುದಾಗಿದೆ.

**ತದ್ಧೇತು ವ್ಯಪದೇಶಾಚ್ಚ**

ಬ್ರಹ್ಮಸೂತ್ರದ ಆನಂದಮಯಾಧಿಕರಣದ **'ತದ್ಧೇತು ವ್ಯಪದೇಶಾಚ್ಚ'** ಎಂಬ ಬ್ರಹ್ಮಸೂತ್ರ (೧-೧-೧೪) **'ಕೋಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್'** ಎಂಬ ತೈತ್ತಿರೀಯೋಪನಿಷತ್ತಿನ (೨-೧೨) ಮಾತಿನ ಆಧಾರದಲ್ಲಿ ಸಿದ್ಧಾಂತಿಸಿರುವಂತೆ ಭಗವಂತನು ಆನಂದಾತಿಶಯಕ್ಕೆ ಒಳಗಾಗಿ ಯಜ್ಞ ಯಾಗಾದಿಗಳಿಗೆ ಸಂಬಂಧಿಸುವ ದೊಡ್ಡ ಪ್ರವೃತ್ತಿಗಳಲ್ಲೂ, ಉಸಿರಾಟ ಮುಂತಾದ ಚಿಕ್ಕ ಪುಟ್ಟ ಪ್ರವೃತ್ತಿಗಳಲ್ಲೂ ಪ್ರೇರಿಸುವನು. ಹೀಗೆ ನಮ್ಮ ಪ್ರತಿಯೊಂದು ಕರ್ಮದ ಪ್ರೇರಣೆಗೆ ಪ್ರಯೋಜಕವಾಗಿ ಭಗವಂತನ ಆನಂದಾತಿಶಯವನ್ನು ಅನುಸಂಧಾನಕ್ಕೆ ತಂದುಕೊಂಡಾಗ, ಆ ಆನಂದಾತಿಶಯದ ಆಧಾರದಲ್ಲಿ **'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ'** ಎಂಬ ಛಾಂದೋಗ್ಯೋಪನಿಷತ್ತಿನ ವ್ಯಾಪ್ತಿಗನುಗುಣವಾಗಿ ಗುಣಪೂರ್ಣತ್ವವನ್ನೂ ಅನುಸಂಧಾನಕ್ಕೆ ತಂದುಕೊಂಡಾಗ ಅವನ ಬಗ್ಗೆ ಮಹತ್ತ್ವಬುದ್ಧಿಯು ಉದಯಿಸಬಲ್ಲದು. ಅಂತಹ ಈ ಮಹಾತ್ಮ **'ಸೋಽಯಂ ವಿಹಾರ ಇಹಮೇ ತನುಭೃತ್ಸ್ವಭಾವ ಸಂಭೂತಯೇ.....'** ಎಂದಿರುವಂತೆ ನನ್ನ ಸ್ವಭಾವದ ಅಭಿವ್ಯಕ್ತಿಗಾಗಿ ಈ ಕರ್ಮಗಳನ್ನು ಮಾಡಿಸುವಷ್ಟೂ ನನ್ನ ಬಗ್ಗೆ ಪ್ರೀತಿ ತೋರಿಸುತ್ತಿದ್ದಾನೆಂಬುದನ್ನು ವಿವೇಚಿಸಿಕೊಂಡಾಗ ಅವನ ಬಗ್ಗೆ ಪ್ರೀತಿಯೂ ಉಕ್ಕಬಲ್ಲದು. ಈ ಬಗೆಯ ತಿಳುವಳಿಕೆ, ಪ್ರೀತಿ ಇವುಗಳ ಹಿನ್ನಲೆಯಲ್ಲಿ ನಡೆಸಲಾಗುವ

(38ನೇ ಪುಟದಲ್ಲಿ...)

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

ಸಾಂಪರಾಯ ಎಂಬುದು ಭಗವಂತನ ಹೆಸರು. ಎಲ್ಲಾ ಆಯ-ಆದಾಯಗಳಿಗೂ ವ್ಯಯ ಇದ್ದದ್ದೇ. ನಾನು ಪಟ್ಟ ಕಷ್ಟ ಗಮನಿಸಿದಾಗ ಆದಾಯ ಅಷ್ಟಕ್ಕಷ್ಟೆ. ಹೀಗಾಗಿ ಆದಾಯ ಎನ್ನುವುದು ವಿಮರ್ಶಕರ ದೃಷ್ಟಿಯಲ್ಲಿ ಹಿರಿಯರ ದೃಷ್ಟಿಯಲ್ಲಿ ಹೀನಾಯ. ಅದು ಹೀನಾಯ ಎನಿಸದೆ ಪರಾಯ-ಅತ್ಯುತ್ತಮ ಆದಾಯ ಆಗಬೇಕಾದರೆ ಪ್ರಯತ್ನಕ್ಕಿಂತ ಫಲ ದೊಡ್ಡದಾಗಬೇಕು. ಒಂದು ಮಾವಿನ ಹಣ್ಣಿಗೆ ಕಿತ್ತಲೆ ಹಣ್ಣು ಸಿಗುವುದು ಹೀನಾಯ. ಬೇರೆ ಮಾವಿನ ಹಣ್ಣು ಸಿಗುವುದು ಸಂದಾಯ. ಮಾವಿನ ಬೀಜಕ್ಕೆ ಇಡೀ ಮಾವಿನ ಮರವೇ ಮುಂದೆ ಸಿಗುವುದು ಪರಾಯ. ಅರಿತು ಮಾಡಿದ ನಿಷ್ಕಾಮ ಕರ್ಮಕ್ಕೆ ಸಿಗುವ ಜ್ಞಾನ ಪರಾಯ. ಆದರೆ ಮಾವಿನ ಮರಕ್ಕಿಂತಲೂ ಹಣ್ಣುಗಳೇ ನಮ್ಮ ಕೈಗೆ ಸಿಗುತ್ತಲಿದ್ದರೆ ಎಂತಹ ಸಂಪೂರ್ಣ ಸುಖ. ಈ ಸಂಪೂರ್ಣ ಸುಖಮಯ ಆದಾಯ= ನಿತ್ಯನಿರುತರ ಸುಖ ಎನಿಸಿದ ಮೋಕ್ಷವೇ ಸಾಂಪರಾಯ. ಆ ಮೋಕ್ಷವಂತೂ ಹರಿಯ ಕೃಪೆ ಇರದೆ ಕೈಗೆ ಸಿಗದು. ಹೀಗಾಗಿ ಸಾಂಪರಾಯ ಎಂದರೆ ಮೋಕ್ಷ ನೀಡುವ ಆ ಭಗವಂತ.

ಪ್ರಾಯಶಃ ಪರಲೋಕಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟು ಯಮ-ನಿಯಮಗಳ ಅಂತಿಮಫಲ ಪಡೆವ ಸಾಧಕರ ಮೇಲೆ ಕಡೆಗೂ ಹರಿ ತೋರಿದ ಕರುಣೆ ಯಮನ ಮನಸ್ಸನ್ನು ಕರಗಿಸಿರಬೇಕು. ಹೀಗಾಗಿ ಯಮ ಹರಿಯನ್ನು ಸಾಂಪರಾಯ ಎಂದೇ ಹೆಸರಿಸಿದ್ದಾನೆ.

ಇಂತಹ ಭಗವಂತನು ಬಾಲಕರಿಗೆ ಅಂದರೆ ಬಾಲಿಶರಿಗೆ ತೋರುವುದಿಲ್ಲ. ಮಕ್ಕಳನ್ನು ಬಾಲಕರು ಎನ್ನುತ್ತಾರೆ. ಅವರಿಗೆ ಕೈಯಲ್ಲಿರುವ ಚೆಂಡನ್ನು ಬಿಸಾಡುವ ಸ್ವಭಾವ. ಉರುಳಿ ಬಿದ್ದಾಗ ಅಳುವುದಷ್ಟೇ ಗೊತ್ತು. ಮತ್ತೆ ತೆಗೆದುಕೊಟ್ಟಾಗ ಬಿಸಾಡಿ ಬಿಕ್ಕುವುದಷ್ಟೇ ಗೊತ್ತು. ಮಕ್ಕಳು ಎಂದರೆ ಕಳೆದುಕೊಳ್ಳುವವರು. ಜವಾಬ್ದಾರಿಯಿಲ್ಲದವರು. ಮನೆಯಲ್ಲಿಯೇ ಇದ್ದು ಮನೆಯ ವಸ್ತುವನ್ನು ಬೀದಿಗೆ ತಂದು ಬಿಸಾಡುವುದು ಮಕ್ಕಳ ಚೇಷ್ಟೆ. ಅಂದರೆ ಕುಚೇಷ್ಟೆ. ಅದನ್ನೇ ಸಾಹಸ-ಸಾಧನೆ ಎಂದು ಮಕ್ಕಳು ಭಾವಿಸುತ್ತವೆ. ಅಷ್ಟಕ್ಕೆ ನಗುತ್ತವೆ.

ಅವರು ಬಾಲಕರು. ಯಮನು ಅಂತಹವರಂತೆಯೇ ಇರುವ ಬೆಳೆದ ಮಂದಿಯನ್ನು ಬಾಲ ಎನ್ನುತ್ತಾನೆ. ಮಗುವಿಗೆ ಕುತ್ತಿಗೆಯಲ್ಲಿರುವ ಸರದ ಬೆಲೆ ಗೊತ್ತಿಲ್ಲ. ಹಾಗೆಯೇ ಈ ಮಂದಿಗೆ ಮಾನುಷ ಜನ್ಮದ ಹಿರಿತನದ ಅರಿವು ತಿಳಿದಿಲ್ಲ. ಮಗು ಚಂದ್ರನನ್ನು ನನಗೆ ತಂದುಕೊಡು

ಎಂಬಂತೆ ಎಲ್ಲಾ ತಮಗೆ ಸಿಕ್ಕೇ ಸಿಗುತ್ತದೆ ಎಂದು ಭಾವಿಸುವ ಈ ಮಂದಿ. ಬಾಲಕರು ಅಂದರೆ ಬಾಲಿಶರು. ಮಗುವಿಗೆ ಅಜ್ಞಾನ ಮುಂದು-ವಿಜ್ಞಾನ ಎಂದೆಂದೂ ಹಿಂದು. ಹೀಗಾಗಿ ಆ ಮಗು ಹಠಮಾರಿಯಾಗಿ ಇರುತ್ತದೆ. ಇಂತಹ ಅಜ್ಞಾನಿಗಳ ಹಠಮಾರಿಗಳ ಗುಂಪನ್ನು ಬಾಲ ಎನ್ನುತ್ತಾನೆ. ಬಾಲಕರಿಗೆ ವಯಸ್ಸಾಗದೇ ಇರುವುದರಿಂದ ಅವರ ಧೋರಣೆ ಕ್ಷಮಾರ್ಹ. ಈ ಬೆಳೆದ ಮಂದಿಗೆ ವಯಸ್ಸು ಆದದ್ದು ವ್ಯರ್ಥ. ಅವರನ್ನು ಬೆಳೆದವರು ಎನ್ನುವುದು ಬೆಳೆಯುವ ಕ್ರಿಯೆಗೆ ಅವಮಾನ. ಹೀಗಾಗಿ ಯಮನು ಅವರನ್ನು ಬಾಲ ಎಂದೇ ಕರೆಯುತ್ತಾನೆ.

ಇಂತಹ ಬಾಲರಿಗೆ ಬಾಲಿಶರಿಗೆ ಗೊತ್ತಿರುವುದು ಹಣ ಮಾತ್ರ. ಅದಕ್ಕಾಗಿ ಹಾತೊರೆಯುತ್ತಾರೆ. ತಂದೆ-ತಾಯಿಗಳನ್ನು ತೊರೆಯುತ್ತಾರೆ. ನೀತಿ-ನಿಯಮಗಳನ್ನು ಗಾಳಿಗೆ ತೂರುತ್ತಾರೆ. ದೇವರನ್ನು-ಮೌಲ್ಯಗಳನ್ನು ಹೀಯಾಳಿಸುತ್ತಾರೆ. ಹಣವೊಂದಿದ್ದರೆ ಸಾಕು ಎನ್ನುತ್ತಾರೆ. Money makes many things ಇದು ಅವರ ತತ್ತ್ವ. ವಿತ್ತಮೋಹ-ಧನದಾಹದಿಂದ ಮೂಢರಾಗಿರುತ್ತಾರೆ. ಬಾಯಾರಿದವನು ನೀರು ಮಾತ್ರ ಬಯಸುವಂತೆ ಇವರಿಗೆ ಹಣ ಮಾತ್ರ ಬೇಕು.

ಇಂದಿನ ಮಕ್ಕಳು ತಂದೆ-ತಾಯಿಗಳನ್ನು ತೊರೆದು ವಿದೇಶಕ್ಕೆ ಹೋಗಿ ನೆಲೆಸುತ್ತಾರೆ. ಕೇಳಿದರೆ ಹಣ ಸಂಪಾದನೆ ಎನ್ನುತ್ತಾರೆ. ಪುತ್ರನ ಕರ್ತವ್ಯ ಮರೆತಿರುತ್ತಾರೆ. ತಮಗೂ ವಯಸ್ಸಾಗುತ್ತದೆ ಎಂಬುದನ್ನೂ ಮರೆತಿರುತ್ತಾರೆ.

ವಿತ್ತಮೋಹದಿಂದ ಚಿತ್ತಭ್ರಾಂತರಾಗಿರುತ್ತಾರೆ. ಅಯ್ಯೋ ತಿಳಿವಳಿಕೆ ಇಲ್ಲಾ ಎನ್ನಬೇಡಿ. ಅವರು ತಿಳಿದಿದ್ದಾರೆ. ತಿಳಿಗೇಡಿಗಳಾಗಿದ್ದಾರೆ. ಇಲ್ಲಿ ಲೋಕೋಪಕಾರವೂ ಇಲ್ಲ ಪರಲೋಕದ ಪುಣ್ಯವೂ ಇಲ್ಲ.

ಅವರಿಗೆ ಕಾಣುವುದು ಈ ಭೂಲೋಕ ಮಾತ್ರ. 'ಅಯಂ ಲೋಕಃ' ಈ ಲೋಕ ಮಾತ್ರ ನಂಬುತ್ತಾರೆ. ಆ ಲೋಕ-ಅವಲೋಕನ ಇದು ಇಲ್ಲವೇ ಇಲ್ಲ. ಇವತ್ತು ಹೀಗಿದ್ದು ಸಾಗಿಸಿದರೆ ಆಯಿತು-ನಾಳೆ ಏನಾದರೆ ನಮಗೇನು ಎನ್ನುತ್ತಾರೆ. ನಾಳೆಗೇ ಯೋಚಿಸದವ ಪರಲೋಕದ ನಾಳೆಗೆ ಚಿಂತಿಸುತ್ತಾನೇನು?

ಪರಲೋಕ ಇಲ್ಲ ಎಂದು ಹೇಳುತ್ತಾನೆ. ಪಾಪ-ಪುಣ್ಯ ಇವು ಕಟ್ಟು ಕಥೆ ಎನ್ನುತ್ತಾನೆ.

ಏಕೆಂದರೆ ಒಪ್ಪಿದರೆ ಸ್ನಾನ-ಸಂಧ್ಯಾವಂದನೆಗೆ ಸಮಯ ಕೊಡಬೇಕು. ಪರೋಪಕಾರಕ್ಕೆ ಪುಣ್ಯಕಾರ್ಯಕ್ಕೆ ಧನ ಬಿಚ್ಚಬೇಕು. ಹೀಗಾಗಿ ಲೋಭಿಯಾಗಿ ಪರಲೋಕ ಇಲ್ಲ ಎನ್ನುತ್ತಾನೆ. ಮೊದಲು ಧನದ ಕಾಮ. ಆ ಮೇಲೆ ಸತ್ಕಾರ್ಯಕ್ಕೆ ಹಣ ಖರ್ಚಾಗುವ ಕ್ರೋಧ. ಇನ್ನೊಮ್ಮೆ ಪುಣ್ಯದ ಸದ್ದು ಕೇಳಲೇ ಬಾರದು ಎಂಬ ಸಮ್ಮೋಹ. ಮೋಹ ಗಾಢವಾದಾಗ ಮೂಢನಾಗುತ್ತಾನೆ. ಯಮನು 'ವಿತ್ತಮೋಹೇನ ಮೂಢಮ್' ಎಂದೇ ಕರೆದನು. ★

# ಶ್ರೀನಾರಾಯಣವರ್ಮ

-ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು

ಸತ್ಕರ್ಮಗಳೆನಿಸಿದ ಯಜ್ಞಯಾಗಾದಿಗಳ ಮೂಲಕ ನಾವು ಭಗವಂತನನ್ನು ಗುರುತಿಸಬೇಕು. ಆತ್ಮನು ನಿತ್ಯನಾಗಿದ್ದರೂ ಪ್ರಕಟನಾಗಲು ಶರೀರ ಬೇಕಾಗುವಂತೆ ವ್ಯಾಪ್ತನಾದ ಭಗವಂತನು ಪ್ರಕಟನಾಗಲು ಯಜ್ಞ ಬೇಕು. ಸತ್ಕರ್ಮಗಳಿಂದ ಭಗವಂತ ಯಜ್ಞವೆಂಬ ಶರೀರದಲ್ಲಿದ್ದು ವ್ಯಕ್ತನಾಗುತ್ತಾನೆ. ಇಂತಹ ಯಜ್ಞವರಾಹನನ್ನು ಭೂದೇವಿ ಹೀಗೆ ಸ್ತುತಿಸುತ್ತಾಳೆ-

**ಓಂ ನಮೋ ಭಗವತೇ ಮಂತ್ರತತ್ವಲಿಂಗಾಯ ಯಜ್ಞಕ್ರತವೇ**
**ಮಹೀಧರಾಯ ಮಹಾಪುರುಷಾಯ ನಮಃ**
**ಕರ್ಮ ಶುಕ್ಲಾಯ ತ್ರಿಯುಗಾಯ ನಮಸ್ತೇ** (೫-೧೮-೩೫)

'ವೇದಮಂತ್ರಗಳ ಮುಖ್ಯ ತಾತ್ಪರ್ಯಕ್ಕೆ ವಿಷಯನಾದ ಯಜ್ಞ ವರಾಹನೇ! ಭೂಮಿಯನ್ನು ಧರಿಸಿದ, ಶುದ್ಧಕರ್ಮಪ್ರವರ್ತಕನಾದ, ತ್ರಿಯುಗಹೂತಿಯಾದ ಪರಮಪುರುಷನೇ! ಷಡ್ಗುಣೈಶ್ವರ್ಯಸಂಪನ್ನನೇ ನಿನಗೆ ನಮೋ ನಮಃ.

ವರಾಹನ ಎರಡು ರೂಪಗಳಿವೆ. ಒಂದು ಕೋರೆದಾಡೆಯಲ್ಲಿ ಭೂಮಿಯನ್ನು ಹೊತ್ತ ವರಾಹ-ಮತ್ತೊಂದು ಧರಾಲಿಂಗಿತನಾಗಿ ಶೇಷನ ಹೆಡೆಯ ಮೇಲೆ ಪಾದ ಇಟ್ಟ ವರಾಹ. ಆ ರೂಪದ್ವಯಗಳ ಚಿಂತನೆಯನ್ನು ವಾದಿರಾಜರು ಹೇಳಿಕೊಡುತ್ತಾರೆ.

ಭೂಮಿಯನ್ನು ಹಿರಣ್ಯಾಕ್ಷನು ಕದ್ದೊಯ್ದಾಗ ಶ್ರೀಹರಿಯು ಕೋರೆಯಿಂದ ಮೇಲಕ್ಕೆತ್ತಿದ. ಧರೆಯನ್ನು ಲೀಲೆಯಿಂದ ತರುವಾಗ ಶೇಷದೇವನು ಧರೆಯನ್ನು ತನ್ನ ತಲೆಯಲ್ಲಿಡುವಂತೆ ಬೇಡಿದ. ಪರಮಾತ್ಮನ ಮಡದಿಯಾದ, ಜ್ಞಾನದೇವತೆಯಾದ ಧರೆಯನ್ನು ಶಿರದಲ್ಲಿ ಧರಿಸಿದಲ್ಲಿ ಜ್ಞಾನ ದೊರೆಯುತ್ತದೆಂದು ಅವನ ಚಿಂತನೆ. ಅವನಂತೆ ಸಾಕ್ಷಾತ್ ಧರಾದೇವಿಯು ಬಂದು ವರಾಹನ ಬಳಿ ಬೇಡಿದಳು. ಅಸುರನು ಮತ್ತೂ ಅಪಹರಿಸದಂತೆ ನಿನ್ನ ತೊಡೆಯಲ್ಲಿಯೇ ನನ್ನನ್ನು

ಧರಿಸು ಎಂದು. ವರಾಹನ ಬಳಿ ಹೀಗೆ ಇಬ್ಬರೂ ಭಕ್ತರು ಬಂದು ಬೇಡಿದಾಗ ಹರಿಯು ಒಂದು ಕ್ಷಣಕಾಲ ಗೊಂದಲಕ್ಕೆ ತುತ್ತಾದವನಂತೆ ತೋರುತ್ತಾ ಧರೆಯನ್ನು ಎಲ್ಲಿಡಬೇಕೆಂದು ತಿಳಿಯದೆ ಸಂಶಯಗ್ರಸ್ತನಾಗಿ ತನ್ನ ಮೂಗಿನ ಮೇಲೆಯೇ ಇಟ್ಟುಕೊಂಡನಂತೆ. ಇಂತಹ ಸಂಶಯಗ್ರಸ್ತನಾದ ಹರಿಯನ್ನು ಸ್ತುತಿಸುವೆ ಎನ್ನುತ್ತಾರೆ ರಾಜರು.

**ಧಾತ್ರೀಂ ಶುಭಗುಣಪಾತ್ರೀಂ ಆದಾಯಾಶೇಷವಿಬುಧಮೋದಾಯ ।**

**ಶೇಷೇ ತಮಿಮಮದೋಷೇ ದಾತುಂ ಹಾತುಂ ಚ ಶಂಕಿನಂ ಶಂಕೇ ॥**

ಇಲ್ಲಿ ವರಾಹನ ಸಂದೇಶವಿಷ್ಟೇ. ಯಾರಿಗಾದರೂ ಗೊಂದಲಬಂದಾಗ ಮೂಗಿನಮೇಲೆ ನಿಮ್ಮ ಬೆರಳಿಟ್ಟು ಯೋಚಿಸಿ ಅದು ಹೊಳೆಯುತ್ತದೆ ಎಂಬ ಸೂಚನೆ ಇರಬೇಕು. ಆದ್ದರಿಂದಲೇ ಇಂದು ಸಜ್ಜನರು ಗೊಂದಲದಲ್ಲಿ ಮೂಗಿನ ಮೇಲೆ ಬೆರಳಿಟ್ಟು ಯೋಚಿಸುವುದುಂಟು. ಆದರೆ ಈ ವರಾಹನಿಗೆ ಎಂದೂ ಗೊಂದಲವಿಲ್ಲ. ಏಕೆಂದರೆ ಇಬ್ಬರು ಭಕ್ತರೂ ದೇವರ ಸೇವೆಗೆ ಅವಕಾಶ ಕೇಳಿದರು. ಅದರಲ್ಲಿ 'ವಃ= ಜ್ಞಾನ' ಎಂಬ ಹೆಸರಿನ ಜ್ಞಾನ ಪಾದವಾದ ಎಡಪಾದವನ್ನೇ ಧರೆ-ಶೇಷರಿಗೆ ನೀಡಿ ಇಬ್ಬರನ್ನು ಸಮಾಧಾನಪಡಿಸಿದ. ಆ ರೂಪವೇ ಧರಾಲಿಂಗಿತ ಶೇಷಫಣನ್ಯಸ್ತ ಪದನಾದ ವರಾಹ. ಇಂದಿಗೂ ಈ ವರಾಹಮೂರ್ತಿ ಸೋದೆ ಮಠದಲ್ಲಿ ಮಧ್ವ ಕರಾಂಚಿತನಾಗಿ ಮೆರೆಯುತ್ತಿದ್ದಾನೆ.

**ವಾಮಾಂಕಸ್ಥಧರಾಕರಾಂಜಲಿಪುಟ ಪ್ರೇಮಾತಿಹೃಷ್ಟಾಂತರಮ್ ।**

**ಸೀಮಾತೀತಗುಣಂ ಫಣೇಂದ್ರ ಫಣಗಶ್ರೀಮಾನ್ಯಪಾದಾಂಬುಜಮ್॥**

**ಕಾಮಾದ್ಯಾತ್ತಕಶಂಖಚಕ್ರಸುವರೋದ್ಧಾಮಾಭಯೋದ್ಯತ್ಕರಮ್ ।**

**ಸಾಮಾದೀಡ್ಯವರಾಹರೂಪಮಮಲಂ ಹೇ ಮಾನಸೇಹಸ್ಮರ ॥**

**ಭಕುತಿಯಿಂದ ಕರಮುಗಿವ ಧರೆಯ ಭರದಿಂದ ಧರಿಸಿ ಮೆರೆವ**

**ನಿಸ್ಸೀಮಮಹಿಮ ಫಣಿರಾಜ ಫಣದಿ ಸಿರಿಪಾದ ಕಮಲ ಇರಿಸಿ**

**ಕಾಮಚಕ್ರ ಸಿರಿ ಶಂಖ ವರದ ಶುಭ ಅಭಯ ಹಸ್ತ ಹರಿಯು (ಸಿರಿಯ)**

**ಸಾಮವೇದನುತ ನೀಲ-ಕೋಲ-ಶುಭಧಾಮ ಹರಿಯಸ್ಮರಿಸು.**

★

ಪುರಾಣ ಸಂದೇಶ

# ಮಾರ್ಕಂಡೇಯ ಪುರಾಣ

ವಿ|| ಅಡ್ವೆ ಲಕ್ಷ್ಮೀಶಾಚಾರ್ಯ

## ಸೃಷ್ಟಿಯ ವೈಚಿತ್ರ್ಯ

ಇಂತಹ ಬ್ರಹ್ಮಾಂಡದಲ್ಲಿ ದೇವತೆಗಳು ಪಿತೃಗಳು ಗಂಧರ್ವರು, ಉರಗರು, ಭೂತಪ್ರೇತಾದಿಗಳು, ಸ್ಥಾವರ-ಜಂಗಮಾದಿಗಳ ಸೃಷ್ಟಿಮಾಡಿ, ಅವರವರ ಕರ್ತವ್ಯವನ್ನು ಕಲ್ಪಿಸಿದರು.

**ನಾಮರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರಪಂಚನಂ ।**
**ವೇದಶಬ್ದೇಭ್ಯಏವಾದೌ ದೇವಾದೀನಾಂ ಚಕಾರ ಸಃ ॥**

ಸೃಷ್ಟಿಯ ಆರಂಭದಲ್ಲಿ ಜೀವಿಗಳ ಮನಸ್ಥಿತಿಯನ್ನು ಮಾರ್ಕಂಡೇಯ ಪುರಾಣ ವಿವರಿಸುತ್ತದೆ.

**ತೃಪ್ತಿಂ ಸ್ವಾಭಾವಿಕೀಂ ಪ್ರಾಪ್ತಾಃ ವಿಷಯೇಷು ಮಹಾಮತೇ ।**
**ನತಾಸಾಂ ಪ್ರತಿಘಾತೋಽಸ್ತಿ ನದ್ವೇಷೋ ನಾಪಿ ಮತ್ಸರಃ ॥**

## ಸಂಯಮದ ವಿಲಾಸ-ಬಯಲಿನಲ್ಲೇ ವಾಸ

**'ನ ದ್ವೇಷಃ ನಾಪಿ ಮತ್ಸರಃ'** ಪರಸ್ಪರ ಸಹಕಾರದ ಬದುಕು. ಆದ್ದರಿಂದಲೇ ನಿತ್ಯಂ ಮುದಿತ ಮಾನಸಾ ಆಗಿದ್ದರು.. ಬೇಡಿದ್ದನ್ನು ನೀಡುವ ಕಲ್ಪವೃಕ್ಷದ ಆಶ್ರಯ. ಸಾವಿರಾರು ವರ್ಷಗಳ ಆಯುಷ್ಯ. ಆಕಾಲಿಕ ಮರಣದ ಪ್ರಶ್ನೆಯೇ ಇಲ್ಲ. ಜೀವನಾಂತ್ಯದಲ್ಲಿ ಒಮ್ಮೆ ಸ್ತ್ರೀಯರು ಋತುಮತಿಯರಾಗಿ ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳನ್ನು ಹಡೆಯುತ್ತಿದ್ದರು. **'ಆಯುಷ್ಯಾಂತೇ ಪ್ರಸೂಯಂತೇ'** ಕಾಲಾನುಕ್ರಮದಲ್ಲಿ ಧರ್ಮದ ಬೇರು ಸಡಿಲಾದಾಗ ಹಿಂದಿನ ವ್ಯವಸ್ಥೆಗಳಲ್ಲೂ ಮಾರ್ಪಾಟಾಯಿತು. ಕೃತ್ರಿಮವಾದ ಮನೆ, ದುರ್ಗಗಳು, ರಕ್ಷಣಾವ್ಯವಸ್ಥೆ, ಆಡಳಿತ ವ್ಯವಸ್ಥೆ, ಗ್ರಾಮ, ಪಟ್ಟಣ, ಪುರ, ನಗರ, ಗೋಮಾಳ, ತಿಂಗಳಿಗೊಮ್ಮೆ ಸ್ತ್ರೀಯರು ಋತುಮತಿಯರಾಗುವುದು. ವೈವಾಹಿಕ ಬದುಕಿನ ನಿರ್ಬಂಧ. ಹೀಗೆ ಸಂಯಮವನ್ನು ಕಳಕೊಂಡ ಜಗತ್ತಿಗೆ ಧರ್ಮದ ಹಳಿಯಲ್ಲಿ ಸಾಗಲು ಧರ್ಮಶಾಸ್ತ್ರಗಳು ವಿಧಿಸಲ್ಪಟ್ಟವು.

ಸೃಷ್ಟಿ ಪ್ರಕ್ರಿಯೆಯು ಬೆಳೆಯದಿರುವುದನ್ನು ಕಂಡು ಬ್ರಹ್ಮದೇವರು ಈ ರೀತಿ ಚಿಂತಿಸಿದರು. ಮೈಥುನ ಧರ್ಮದಿಂದಲೇ ಈ ಸೃಷ್ಟಿಯ ಪ್ರಕ್ರಿಯೆ

ಮುಂದುವರೆಯಬೇಕೆಂದು ನವಪ್ರಜಾಪತಿಗಳನ್ನು ಸೃಷ್ಟಿಸಿದರು.

**ಭೃಗುಂ, ಪುಲಸ್ತ್ಯಂ, ಪುಲಹಂ, ಕ್ರತುಮಂಗಿರಸಂ ತಥಾ ಮರೀಚಂ ದಕ್ಷಮತ್ರಿಂ ಚ ವಸಿಷ್ಠಂ ಚೈವ ಮಾನಸಾನ್ ॥**

ಸೃಷ್ಟಿ ಕಾರ್ಯವನ್ನು ಒಲ್ಲದ ಸನಕಾದಿಗಳಲ್ಲಿ ಮಾಡಿದ ಕೋಪವು ರುದ್ರಮೂರ್ತಿಯಾಗಿ ಹೊರಬಂತು. ಅವನೇ ರುದ್ರ, ಮತ್ತೆ ಬ್ರಹ್ಮದೇವರ ಶರೀರದಿಂದ ಅರ್ಧನಾರಿ ರೂಪವುಳ್ಳ ವ್ಯಕ್ತಿ ಪ್ರಕಟನಾದಾಗ ಶರೀರವನ್ನು 'ವಿಭಜ' ಎಂದಾಗ ಒಂದು ಹೆಣ್ಣು ಒಂದು ಗಂಡಾಗಿ ಕಾಣಿಸಿಕೊಂಡರು. ಇವರೇ ಆದಿಮಾನವರು. ಇವರೇ ಸ್ವಾಯಂಭುವ ಮತ್ತು ಶತರೂಪಾ. ಪ್ರಜಾಪಾಲನೆಗೆ ಈ ಮನುವನ್ನು ನಿಯುಕ್ತಗೊಳಿಸಿದರು. ಈ ದಂಪತಿಗಳಲ್ಲಿ ಪ್ರಿಯವ್ರತ ಮತ್ತು ಉತ್ತಾನಪಾದ ಎಂಬ ಗಂಡು ಮಕ್ಕಳು. ಆಕೂತಿ ಮತ್ತು ಪ್ರಸೂತಿ ಎಂಬ ಹೆಣ್ಣು ಮಕ್ಕಳು ಜನಿಸಿದರು. ಆಕೂತಿ ರುಚಿ ಪ್ರಜಾಪತಿಯ ಕೈ ಹಿಡಿದಳು. ಪ್ರಸೂತಿ ನವಪ್ರಜಾಪತಿಗಳಲ್ಲಿ ಒಬ್ಬನಾದ ದಕ್ಷನ ಮಡದಿಯಾದಳು. ಮುಂದೆ ಇವರಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಂದಲೇ ಸೃಷ್ಟಿ ಕಾರ್ಯವು ವಿಸ್ತಾರವಾಯಿತು. ಮುಂದೆ ಆದ ಸೃಷ್ಟಿಯ ಅನಿಷ್ಟ ಸಂತಾನ 'ದುಃಸಹ'. ಈತ ಅಲಕ್ಷ್ಮಿ ಮತ್ತು ಮೃತ್ಯುವಿನ ಪುತ್ರ. ಇಡೀ ಜಗತ್ತನ್ನೇ ಕಬಳಿಸ ಹೊರಟ ಇವನನ್ನು ಬ್ರಹ್ಮದೇವರು ತಡೆದರು.

**'ನಾತ್ತವ್ಯಂ ಜಗದಿದಂ ಜಹಿಕೋಪಂ ಶಮಂ ವ್ರಜ'** ತನ್ನ ಬದುಕಿಗೆ ವ್ಯವಸ್ಥೆ ಕಲ್ಪಿಸಬೇಕೆಂದು ಆತ ಕೇಳಿಕೊಂಡಾಗ ಶಾಸ್ತ್ರಬಾಹಿರವಾದ ಕರ್ಮದ ಫಲ ನಿನಗೆ ಆಹಾರ ಎಂದು ದುಃಸಹನಿಗೆ ಗತಿ ಕಲ್ಪಿಸಿದರು.

**ಬ್ರಾಹ್ಮಣ ಕ್ಷತ್ರಿಯ ವಿಶಾಂ ಶೂದ್ರಾಣಾಂ ಸ್ವಕರ್ಮತಃ ಪರಿಚ್ಯುತಾನಾಂ ಯಾ ಚೇಷ್ಟಾ ಸಾ ತೇ ಯಕ್ಷ್ಮನ್ ಭವಿಷ್ಯತಿ**

ಶಾಸ್ತ್ರೋಕ್ತವಾದ ಕರ್ಮಾನುಷ್ಠಾನ ಮಾಡುವವರ ಬಳಿ ಸುಳಿಯಬಾರದೆಂಬ ಎಚ್ಚರವನ್ನು ಕೊಟ್ಟರು. ದುಃಸಹನ ಸಂತಾನವೇ ದೌಃಸಹರು ಬಾಲಗ್ರಹಾದಿಗಳಿಂದ ಲೋಕಪೀಡಕರಾದ ಈ ದುಷ್ಟಶಕ್ತಿಗಳ ನಿವಾರಣೆಗೆ ಉಪಾಯ ಕೇಶವ ಕೀರ್ತನ.

**'ದೃಷ್ಟೇ ಶ್ರುತೇ ತಥೈವೋಕ್ತೇ ಕೀರ್ತನೀಯೋ ಜನಾರ್ದನಃ ।**
**ರಾಕ್ಷೋಘ್ನಮಂತ್ರಪಠನೈಃ ರಕ್ಷಾಂಕುರ್ವೀತ ತತ್ತ್ವವಿತ್'॥**

ಹೀಗೆ ಅನೇಕ ವೈಚಿತ್ರ್ಯಗಳಿಂದ ಕೂಡಿದ ಜಗತ್ತು ಬ್ರಹ್ಮನಿಂದ ಸೃಷ್ಟಿಯಾಯಿತು.

★

ಮುಖಪುಟಲೇಖನ

# ಶ್ರೀಮಹಾನುಭಾವನಾದ ದಾಮೋದರ

-ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಕೇಶವಾದಿ ಚತುರ್ವಿಂಶತಿ ರೂಪಗಳಲ್ಲಿ ದಾಮೋದರ ರೂಪವು ಹನ್ನೆರಡನೆಯದ್ದು. ಕಾರ್ತಿಕ ದಾಮೋದರನೆಂದೇ ಪ್ರಸಿದ್ಧನಾಗಿರುವ ಈ ದಾಮೋದರನು ಕಾರ್ತಿಕ ಮಾಸದ ನಿಯಾಮಕದೇವತೆ. ಭಗವಂತನ ಈ ದಾಮೋದರ ರೂಪವು ಮೇಲಿನ ಬಲಗೈಯಲ್ಲಿ ಶಂಖವನ್ನು ಎಡಗೈಯಲ್ಲಿ ಗದೆಯನ್ನು ಕೆಳಗಿನ ಎಡಗೈಯಲ್ಲಿ ಚಕ್ರವನ್ನು ಬಲಗೈಯಲ್ಲಿ ಪದ್ಮವನ್ನು ಧರಿಸಿದ್ದಾನೆಂದು ಶ್ರೀಮನ್ಮಧ್ವಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ.

೧. **ದಾಮಾನಿ ಉದರೇ ಯಸ್ಯ ಸಃ ದಾಮೋದರಃ :-**ದಾಮ ಎಂಬ ಶಬ್ದಕ್ಕೆ ಸಕಲ ಲೋಕಗಳು ಎಂದು ಅರ್ಥ. ಎಲ್ಲಾ ಲೋಕಗಳನ್ನು ತನ್ನ ಹೊಟ್ಟೆಯೊಳಗೆ ಧರಿಸಿದವನ್ನಾದ್ದರಿಂದ ಭಗವಂತನಿಗೆ ದಾಮೋದರ ಎಂಬ ಅಭಿಧಾನ.

**ದಾಮಾನಿ ಲೋಕನಾಮಾನಿ ತಾನಿ ಯಸ್ಯೋದರಾಂತರೇ।**

**ತೇನ ದಾಮೋದರೋ ದೇವಃ ಶ್ರೀಧರಸ್ತು ರಮಾಶ್ರಿತಃ॥**

ವೇದವ್ಯಾಸ ದೇವರ ಈ ವಾಕ್ಯವೂ ಕೂಡ ದಾಮೋದರ ಶಬ್ದಕ್ಕೆ ಇದೇ ಅರ್ಥವನ್ನೇ ಹೇಳುತ್ತಿದೆ.

೨. **ದಾಮ ಉದರೇ ಯಸ್ಯ ಸಃ ದಾಮೋದರಃ** ಹೊಟ್ಟೆಯಲ್ಲಿ ಹಗ್ಗವುಳ್ಳವನಾದ್ದರಿಂದ ಭಗವಂತನಿಗೆ ದಾಮೋದರ ನೆಂಬ ಅಭಿಧಾನ. ಕೃಷ್ಣಾವತಾರ ಕಾಲದಲ್ಲಿ ಬಾಲಲೀಲೆಯನ್ನು ತೋರಿಸುತ್ತಾ ಮೊಸರಿನ ಗಡಿಗೆಯನ್ನು ಒಡೆದ ಕೃಷ್ಣನನ್ನು ಯಶೋದೆಯು ಹಗ್ಗದಿಂದ ಕಟ್ಟಿ ಹಾಕಿದ್ದು ಹೆಚ್ಚಿನ ಪುರಾಣಗಳಲ್ಲಿ ತಿಳಿದು ಬರುವ ವಿಚಾರವಾಗಿದೆ. ಆದ್ದರಿಂದಲೇ ಭಗವಂತನಿಗೆ ಈ ಹೆಸರು.

೩. **ದಮಃ ಇಂದ್ರಿಯ ನಿಗ್ರಹಃ ತತ್ಸಂಬಂಧಿನಃ ದಾಮಾಃ ದಾಂತಾಃ ತೇ ಉದ್ಯಚ್ಛಂತಿ ಉದ್ಗಚ್ಛಂತಿ ಉನ್ನತಿಂ ಪ್ರಾಪ್ನುವಂತಿ ಅನೇನ ಇತಿ ದಾಮೋದರಃ :-**"ದಮ ಇಂದ್ರಿಯ ನಿಗ್ರಹಃ" ಎಂದು ಭಾಗವತದಲ್ಲಿ ತಿಳಿಸಿದಂತೆ ದಮ ಅಂದರೆ ಇಂದ್ರಿಯ ನಿಗ್ರಹ ಎಂದು ಅರ್ಥ. ಇಂದ್ರಿಯ ನಿಗ್ರಹವುಳ್ಳವರಿಗೆ ದಾಮ ಎಂದು ಹೆಸರು. ಅಂತಹ ಇಂದ್ರಿಯ ನಿಗ್ರಹವುಳ್ಳವನನ್ನು ಉದ್ಧರಿಸುವವನಾದ್ದರಿಂದ ಭಗವಂತನಿಗೆ ದಾಮೋದರ ಎಂದು ಹೆಸರು.

**೪. ದಾಮ ಶಬ್ದಕ್ಕೆ ದೇವತೆಗಳು ಎಂದು ಅರ್ಥ.** ದೇವತೆಗಳಿಗೆ ಉತ್ಕೃಷ್ಟವಾದ ಜ್ಞಾನವನ್ನು

ಕರುಣಿಸುವವನಾದ್ದರಿಂದ ಭಗವಂತನಿಗೆ ಈ ಹೆಸರು.

೫. **ದಮಸ್ಯೈವೋ ದಾಮಾಃ ತೈರೇವ ಉದರ್ಯತೇ ಉದ್ಗಮ್ಯತೇ ಇತಿ ದಾಮೋದರಃ** ಅಂದರೆ ಇಂದ್ರಿಯನಿಗ್ರಹವುಳ್ಳವರಿಂದ ಮಾತ್ರ ಹೊಂದಲ್ಪಡುವವನು ಎಂದು ಅರ್ಥ.

೬. **ದದತೀತಿ ದಾಃ ಸಂಪತ್‌ದಾನಶೀಲಾಃ ಸಜ್ಜನಾಃ ತೇಷಾಂ ಆಮೋದಂ ಸುಖಂ ರಾತೀತಿ** ದಾಮೋದರಃ ಅಂದರೆ ಸಂಪತ್ತನ್ನು ದಾನಮಾಡುವವರಿಗೆ ಸುಖವನ್ನು ಕೊಡುವವನು ಎಂದು ಅರ್ಥ.

೭. **ದಾಮ್ಯಾಶ್ಚತೇ ಉದಾಶ್ಚ ದಾಮೋದಾಃ ತೇಷು ರಮತೇ ಇತಿ ದಾಮೋದರಃ** ಅಂದರೆ ದಾಮೋದ ಶಬ್ದಕ್ಕೆ ಇಂದ್ರಿಯ ನಿಗ್ರಹವುಳ್ಳ ಜೀವರಾಶಿಗಳು ಎಂದು ಅರ್ಥ. ಅವರೊಳಗೆ ಇದ್ದುಕೊಂಡು ರಮಿಸುವವನಾದ್ದರಿಂದ ಭಗವಂತನಿಗೆ ದಾಮೋದರ ಎಂಬ ಹೆಸರು.

**ಕಾಮಕ್ರೋಧಬಿಡಿಸಿ ನಿನ್ನ ನಾಮಜಿಹ್ವೆಯೊಳಗೆ ನುಡಿಸೋ ಶ್ರೀಮಹಾನುಭಾವನಾದ ದಾಮೋದರ** ಎಂದು ಕನಕದಾಸರು ದಾಮೋದರನನ್ನು ಸ್ತುತಿಸಿದ್ದಾರೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನನ್ನು ಉಪದೇಶಿಸುತ್ತಾ "ಸಂಗಾತ್ ಸಂಜಾಯತೇ ಕಾಮಃ" ಎಂಬಲ್ಲಿ ಕಾಮಕ್ರೋಧಾದಿಗಳು ಮನುಷ್ಯನ ನಾಶಕ್ಕೆ ಕಾರಣ ಎಂದು ತಿಳಿಸಿದ್ದಾನೆ. ಅರಿಷಡ್ವರ್ಗದಲ್ಲಿ ಸೇರಿದ ಈ ಕಾಮಕ್ರೋಧಗಳು ನಮ್ಮ ಮನಸ್ಸಿನಲ್ಲಿ ನೆಲೆಸಿದ್ದರೆ ನಮ್ಮಿಂದ ಅಧ್ಯಾತ್ಮಿಕ ಸಾಧನೆಗಳು ನಡೆಯಲಾರವು. ಆದ್ದರಿಂದ ನಾವು ಭಗವಂತನೆಡೆಗೆ ಸಾಗಲು ಬೇಕಾದ ಸಾಧನೆ ಮಾಡಬೇಕಾದರೆ ಮೊದಲು ಕಾಮಕ್ರೋಧಗಳನ್ನು ಬಿಡಬೇಕು. ಅದನ್ನು ಹೇಗೆ ಬಿಡುವುದು ಎಂದು ಕೇಳಿದರೆ ಈ ಕಾಮಕ್ರೋಧಗಳೆಲ್ಲಾ ಮನಸ್ಸಿನ ವಿಕಾರಗಳು. ಮನಸ್ಸು ಖಾಲಿಯಾಗಿದ್ದಾಗ ಈ ಕಾಮಕ್ರೋಧಾದಿಗಳು ಮನಸ್ಸನ್ನು ಸೇರಿಕೊಳ್ಳುತ್ತವೆ. ಹಾಗಾಗದಿರಬೇಕಾದರೆ ನಾವು ನಮ್ಮ ಮನಸ್ಸನ್ನು ಎಂದೂ ಖಾಲಿ ಇಡಬಾರದು. ಮನಸ್ಸಿನಲ್ಲಿ ಸದಾಕಾಲ ಭಗವಂತನ ಸ್ಮರಣೆ ಮಾಡುತ್ತಾ ಅವನ ಮಹಿಮೆಗಳನ್ನು ತಿಳಿದು ಗುಣಗಾನ ಮಾಡುತ್ತಿರಬೇಕು. ಸದಾಕಾಲ ಭಗವಂತನನ್ನು ಸ್ಮರಿಸುತ್ತಿದ್ದರೆ ನಮ್ಮ ಸಾಧನೆಗೆ ವಿರೋಧಿಗಳಾದ ಕಾಮಕ್ರೋಧ ಮುಂತಾದವುಗಳು ನಮ್ಮ ಮನಸ್ಸಿನಲ್ಲಿ ಉಂಟಾಗುವುದಿಲ್ಲ. ಆದ್ದರಿಂದಲೇ ಕನಕದಾಸರು ದಾಮೋದರನಲ್ಲಿ ನನ್ನಲ್ಲಿ ಕಾಮಕ್ರೋಧಾದಿಗಳು ಉಂಟಾಗದಂತೆ ಸದಾ ಕಾಲ ನಿನ್ನ ಸ್ಮರಣೆ ಮಾಡುತ್ತಾ ನಿನ್ನಲ್ಲೇ ರತನಾಗುವಂತೆ ಮಾಡು ಎಂದು ಪ್ರಾರ್ಥಿಸಿದ್ದಾರೆ. ಇಂತಹ ದಾಮೋದರನನ್ನು ನಾವು ಕೂಡ ಸದಾಕಾಲ ಸ್ಮರಿಸುತ್ತಾ ನಮ್ಮ ಸಾಧನೆಗೆ ವಿರೋಧಿಗಳಾದ ಕಾಮಕ್ರೋಧಾದಿಗಳು ನಮ್ಮಲ್ಲಿ ಉಂಟಾಗದಂತೆ ಮಾಡು ಎಂದು ಪ್ರಾರ್ಥಿಸೋಣ. ★

# ಮಧ್ವಾನುಜರಿಗೆ ಮಧ್ವಾನುಗ್ರಹದಿಂದ ಮಧ್ವನಾಥನ ದರ್ಶನ

-ಅನಂತಕೃಷ್ಣಾಚಾರ್ಯ

**'ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್'** ಎಂಬುದು ಶ್ರೀಮಧ್ವರ ಮಾತು. ಇದನ್ನು ತಪ್ಪದೆ ಪಾಲಿಸಿದವರು ಶ್ರೀವಿಷ್ಣುತೀರ್ಥರು. ಗುರುಗಳಾದ ಆಚಾರ್ಯ ಶ್ರೀಮಧ್ವರಿಂದ ಸಂನ್ಯಾಸ ಸ್ವೀಕರಿಸಿದ ಬಳಿಕ ಒಂದು ನಿಮಿಷವನ್ನೂ ವ್ಯರ್ಥಗೊಳಿಸಲಿಲ್ಲ. ವೇದಾಂತಗುರುಗಳ ಒಡಹುಟ್ಟಿದ ಆ ತಮ್ಮ ವೇದಾಂತಶಾಸ್ತ್ರದ ಶ್ರವಣ-ಮನನ-ಅನುವಾದಗಳಿಂದ ಕಾಲವನ್ನು ಸಾರ್ಥಕಗೊಳಿಸಿದರು.

ಇಂದ್ರಿಯ ನಿಗ್ರಹ, ಭಕ್ತಿ, ಮೃದುವಾದನಡೆ-ನುಡಿ, ಗುರುಸೇವೆ ಮೊದಲಾದ ಸದ್ಗುಣಗಳಿಂದ ಗುರುಗಳು ತನ್ನ ಮೇಲಿರಿಸಿದ್ದ ಕರುಣೆಯ ಬೀಜವನ್ನು ಗೊಬ್ಬರವನ್ನೆರೆದು ಬೆಳೆಸುವಂತೆ ಹೆಮ್ಮರವನ್ನಾಗಿಸಿದರು.

ಪೂರ್ಣಪ್ರಜ್ಞರ ಕಾರುಣ್ಯವೆಂಬ ಕಲ್ಪವೃಕ್ಷವನ್ನೇ ಪಡೆದ ಅವರ ಮಹಿಮೆಯು ವರ್ಣಿಸಲಸಾಧ್ಯ. ಆದರೂ ಸ್ವಲ್ಪ ಬಣ್ಣಿಸುವುದಾದರೆ-

ಶ್ರೀವಿಷ್ಣುತೀರ್ಥರು ಪ್ರವಚನದಲ್ಲಿ ಚತುರರು, ಮಂತ್ರಸಿದ್ಧರು. 'ಮಧ್ವಶಿಷ್ಯರಲ್ಲಿ ತಾನು ಎರಡನೆಯವ, ಮೂರನೆಯವನಾಗಬಾರದು' ಎಂದು ನಿರ್ಧರಿಸಿದವರು. ಹಾಗೆಯೇ ಮಧ್ವಶಿಷ್ಯರಲ್ಲಿ ಅಗ್ರಗಣ್ಯರಾಗಿಯೇ ಬೆಳಗಿದವರು.

ತೀರ್ಥಯಾತ್ರೆಗೆಂದು ಉತ್ತರದಿಕ್ಕಿಗೆ ಹೊರಟ ಶ್ರೀವಿಷ್ಣುತೀರ್ಥರು ಎಲ್ಲ ತೀರ್ಥಗಳಲ್ಲಿಯೂ ಮಿಂದರು. ಇವರಿಂದ ತೀರ್ಥಗಳು ಮಡಿಯಾದವು. ತೀರ್ಥಗಳಿಂದ ತಾವು ಮಡಿಯಾದರು.

ಭಗವಂತನನ್ನು ಕಾಣಬೇಕೆಂಬ ಛಲದಿಂದ, ಆಸೆಯನ್ನು ತೊರೆದ ಅನೇಕ ತಾಪಸರ ಸಿದ್ಧಿಭೂಮಿಯಾದ, ಸಹ್ಯಾದ್ರಿ ಪರ್ವತಗಳ ಶ್ರೇಣಿಯಲ್ಲಿರುವ ಹರಿಶ್ಚಂದ್ರ ಪರ್ವತವನ್ನು ಯಾರ ಕಣ್ಣಿಗೂ ಕಾಣದಂತೆ ತಲುಪಿ ಅಲ್ಲಿ ಉತ್ತಮವಾದ ಸ್ಥಳದಲ್ಲಿ ತಪಸ್ಸಿಗಾಗಿ ಕುಳಿತರು.

ಮತ್ಸರವನ್ನು ತೊರೆದವರಾದರೂ ಶೀತ-ಉಷ್ಣ ಸುಖ-ದುಃಖ ಮುಂತಾದ ಬಾಳ ಬೆಂಕಿಗೆ ಉರುವಲೆಂದು ತಿಳಿದು ಉಣ್ಣುವುದರಲ್ಲಿ ಮತ್ಸರವುಳ್ಳವರಾಗಿ ಊಟವನ್ನು

ತೊರೆದರು. ಆದರೂ ಭಕ್ತರು ಗಿರಿಯ ಸಮೀಪದವರೆಗೂ ತರುತ್ತಿದ್ದ ಪಂಚಗವ್ಯವನ್ನು ಅವರ ಪ್ರಾರ್ಥನೆಯಂತೆ ಐದೈದು ದಿನಗಳಿಗೊಮ್ಮೆಯಂತೆ ಸ್ವೀಕರಿಸುತ್ತಿದ್ದರು. ಕಡೆಗೊಮ್ಮೆ ಅದನ್ನೂ ತೊರೆದರು. ಕೇವಲ ನೆಲದಲ್ಲಿ ಬಿದ್ದ ಬಿಲ್ವಪತ್ರವನ್ನಷ್ಟೆ ತಿಂದು, ನೀರನ್ನು ಕುಡಿದು ಇತರ ತಪಸ್ವಿಗಳಿಗೂ ಮೀರಿದ ತಪಸ್ಸನ್ನಾಚರಿಸಿದರು.

ಅಹಿಂಸಾ, ಬ್ರಹ್ಮಚರ್ಯ ಮುಂತಾದ ಯಮಉಳ್ಳವರಾಗಿ, ಶೌಚ, ಸ್ವಾಧ್ಯಾಯ ಮುಂತಾದ ನಿಯಮ ಉಳ್ಳವರಾಗಿ ದೈವಾನುಗ್ರಹವಿಲ್ಲದವರು ಒಂದು ದಿನವೂ ಇರಲು ಅಸಾಧ್ಯವಾದ ಶಿಲೆಯೊಂದರ ಕೋಡಿನಲ್ಲಿ ಬಹುಕಾಲ ಕುಳಿತು ಆಸನ ಜಯವನ್ನು ಸಂಪಾದಿಸಿದರು. ಭೂಮಿಗಿಳಿದು ಬಂದ ವಾಯುದೇವರ ಈ ತಮ್ಮ ರೇಚಕ-ಪೂರಕ-ಕುಂಭಕಗಳಿಂದ ವಾಯುವನ್ನು ಬಿಗಿಹಿಡಿದು ಪ್ರಾಣಾಯಾಮ ಜಯವನ್ನು ಸಂಪಾದಿಸಿದರು. ವಿಷಯ ಪದಾರ್ಥಗಳತ್ತ ಹರಿಯುವ ಇಂದ್ರಿಯಗಳನ್ನು ಮನಸ್ಸೆಂಬ ಸಾರಥಿಯಿಂದ ನಿಯಂತ್ರಿಸಿ ಪ್ರತ್ಯಾಹಾರ ಉಳ್ಳವರಾದರು.

ಅಧ್ಯಾತ್ಮದಲ್ಲಿ ನಿಪುಣರಾದ ಅವರು ಶ್ರೀಹರಿಯ ಆಕಾರವನ್ನು ಗುರುಗಳ ಉಪದೇಶದಂತೆ ನೆನೆಯುತ್ತ ಮನಸ್ಸಿನಲ್ಲಿ ಧರಿಸಿದವರಾಗಿ ಬಳಿಕ ಭಗವಂತನನ್ನು ಧ್ಯಾನಿಸುತ್ತ ಯೋಗಿಗಳು ಮಾತ್ರವೇ ಏರಬಹುದಾದ, ಎಲ್ಲ ದುಃಖಗಳನ್ನು ಕಳೆವ ಸಮಾಧಿಸ್ಥಿತಿಯನ್ನು ತಲುಪಿದರು.

ಆನಂದಾದಿ ಗುಣಗಳ ಕಡಲಾದ, ಅಚ್ಚರಿಯಲ್ಲಿ ಅಚ್ಚರಿಯಾದ, ಮುಕ್ತಿದಾಯಕವಾದ ಶ್ರೀಹರಿಯ ರೂಪದಲ್ಲಿ ಸಂಪೂರ್ಣ ಮುಳುಗಿದವರಾಗಿ ಮತ್ತೇನನ್ನೂ ಅರಿಯದವರಾದರು. ಅಂದರೆ ಅಸಂಪ್ರಜ್ಞಾತ ಸಮಾಧಿಸ್ಥಿತಿಯನ್ನು ತಲುಪಿದರು.

ಕಾಮದ ಕಾಟ ತೀರಿದ, ಜ್ಞಾನದ ಕಣ್ಣು ತೆರೆದ ಇವರ ಯೋಗಸಾಧನೆಗೆ ಮೋಕ್ಷವಲ್ಲದೆ ಮತ್ಯಾವ ಬೆಲೆಕಟ್ಟಲೂ ಸಾಧ್ಯವಾಗದು. ಆಗ ಮಧ್ವರ ಅನುಜರಾದ ಇವರಿಗೆ ಮಧ್ವರ ಒಡೆಯನಾದ ಶ್ರೀಹರಿಯು ಮಾಡಿದ ಅನುಗ್ರಹವು ನಮ್ಮಂತಹ ಅಲ್ಪರ ಮನಸ್ಸಿಗೆ ನಿಲುಕದ್ದು. ವರ್ಣಿಸಲಾಗದ್ದು. ರಹಸ್ಯವಾದದ್ದು.

'ಅಹೋ! ಈ ಕಲಿಯುಗದಲ್ಲಿಯೂ ಪೂರ್ಣಪ್ರಜ್ಞರ ಸೇವೆಯ ಮಹಿಮೆಯೆ! ಧನ್ಯರಾದ ಈ ವಿಷ್ಣುತೀರ್ಥರು ಇಂತಹ ಕಲಿಯುಗದಲ್ಲಿಯೂ ಸಿದ್ಧಿ ಪಡೆದದ್ದು ಅದರಿಂದಲೇ ಅಲ್ಲವೆ' ಎಂದು ದೇವತೆಗಳು ಅವರನ್ನು ಕೊಂಡಾಡಿದರು.

(ಸಶೇಷ)

ಪುರಾಣ ಪರಿಚಯ

»ÝW&37

# ಶ್ರೀವಿಷ್ಣುಪುರಾಣ

## ಭಕ್ತನಾದ ಪ್ರಹ್ಲಾದನಿಗೆ ಭಗವಂತ ಒಲಿದ

-ಸ್ಫೂರ್ತಿ

'ರಾಜನ್, ರಾಜ್ಯದ ಆಸೆ ಯಾರಿಗಿಲ್ಲ? ಧನದ ಆಸೆ ಯಾರಿಗಿಲ್ಲ? ಆದರೂ ಈ ಎರಡೂ ಎಲ್ಲರಿಗೂ ದೊರಕುವುದಿಲ್ಲ. ದೊರಕುವವರಿಗೆ ಮಾತ್ರವೇ ದೊರಕುತ್ತದೆ.

**ಸರ್ವ ಏವ ಮಹಾಭಾಗ ಮಹತ್ವಂ ಪ್ರತಿ ಸೋದ್ಯಮಾಃ ।**

**ತಥಾಪಿ ಪುಂಸಾಂ ಭಾಗ್ಯಾನಿ ನೋದ್ಯಮಾ ಭೂತಿಹೇತವಃ ॥** (ವಿ.ಪು. ೧-೧೯-೪೪)

'ಹೇ ಮಹಾಭಾಗ್ಯವಂತನೇ, ಜಗತ್ತಿನಲ್ಲಿ ಎಲ್ಲರೂ ಮಹತ್ವಪೂರ್ಣವಾದ ವಸ್ತುವನ್ನು ಗಳಿಸುವುದಕ್ಕಾಗಿಯೇ ಪ್ರಯತ್ನಶೀಲರಾಗಿರುತ್ತಾರೆ. ಆದರೆ ಅವರ ಐಶ್ವರ್ಯಕ್ಕೆ ಕೇವಲ ಪ್ರಯತ್ನ ಕಾರಣವಾಗಿರುವುದಿಲ್ಲ. ಅವರ ಅದೃಷ್ಟವೇ ಕಾರಣವಾಗಿರುತ್ತದೆ. ಆದ್ದರಿಂದಲೇ ದಡ್ಡರಾದ, ವಿವೇಕವಿಲ್ಲದ, ಶೌರ್ಯವಿಲ್ಲದ, ನೀತಿಗೆಟ್ಟವರಿಗೂ ಅದೃಷ್ಟದಿಂದಾಗಿ ಎಲ್ಲ ಸುಖಭೋಗಗಳು ದೊರಕಬಹುದು.

ಆದ್ದರಿಂದ ವಿವೇಕಿಯಾದವನು ಕೇವಲ ಇಲ್ಲಿಯ ಸುಖಭೋಗಗಳಿಗಾಗಿಯೇ ಪ್ರಯತ್ನಶೀಲನಾಗದೆ ಪುಣ್ಯಪ್ರಾಪ್ತಿಗಾಗಿ ಪ್ರಯತ್ನಿಸಬೇಕು. ಅದಕ್ಕಾಗಿಯೇ ಭಗವಂತನನ್ನು ಆರಾಧಿಸಬೇಕು. ಎಲ್ಲೆಡೆಯೂ ತುಂಬಿ ವಿಶ್ವರೂಪಿಯಾದ ಆ ಭಗವಂತನನ್ನು ತಿಳಿದು ಆರಾಧಿಸಿದರೆ ಆತ ಪ್ರಸನ್ನನಾಗುತ್ತಾನೆ. ಆ ಭಗವಂತ ಪ್ರಸನ್ನನಾದರೆ ಎಲ್ಲ ಕ್ಲೇಶಗಳೂ ನಾಶವಾಗುತ್ತವೆ' ಎಂದು ಪ್ರಹ್ಲಾದನು ತಂದೆ ಹಿರಣ್ಯಕಶಿಪುವಿಗೆ ನುಡಿಯಲು ಕ್ರೋಧವಶನಾದ ಹಿರಣ್ಯಕಶಿಪುವು ದೈತ್ಯರನ್ನು ಕರೆದು 'ಈತನನ್ನು ನಾಗಪಾಶದಲ್ಲಿ ಬಂಧಿಸಿ ಮಹಾಸಾಗರಕ್ಕೆ ಎಸೆಯಿರಿ, ತಡಮಾಡಬೇಡಿರಿ. ಇಲ್ಲದಿದ್ದರೆ ಉಳಿದವರೂ ಈತನ ದಾರಿಯನ್ನೇ ಹಿಡಿದಾರು' ಎಂದು ಗುಡುಗಿದ.

ದೈತ್ಯರು ಒಡೆಯನ ಆಜ್ಞೆಯಂತೆ ಪ್ರಹ್ಲಾದನನ್ನು ನಾಗಪಾಶದಿಂದ ಬಂಧಿಸಿ ಸಮುದ್ರದಲ್ಲಿ ಎಸೆದರು. ಕೂಡಲೆ ಸಮುದ್ರ ಉಕ್ಕೇರಿತು. ಬೃಹದಾಕಾರದ ಅಲೆಗಳು ಎದ್ದು ಇಡೀ ಭೂಮಿಯನ್ನೇ ನುಂಗಲಾರಂಭಿಸಿದವು. ಆಗ ಹಿರಣ್ಯಕಶಿಪು ದೈತ್ಯರನ್ನು ಕರೆದು ನುಡಿದ. 'ಪರ್ವತಗಳನ್ನು ತಂದು ನೀರಿನ ತಳಭಾಗದಲ್ಲಿ ಸ್ವಲ್ಪವೂ ಎಡೆಬಿಡದಂತೆ ಈತನನ್ನು ಮುಚ್ಚಿಬಿಡಿ. ಸಾವಿರಾರು ವರ್ಷಗಳ ಕಾಲ ಅಲ್ಲಿಯೇ ಇರಲಿ. ಬಳಿಕ ಪ್ರಾಣವನ್ನು ಬಿಡುತ್ತಾನಷ್ಟೆ' ಎಂದು

ನುಡಿದ. ದೈತ್ಯರು ಅವನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದರು.

ಪ್ರಹ್ಲಾದನು ಸಮುದ್ರದ ತಲದಲ್ಲಿ, ಬೆಟ್ಟಗಳ ಅಡಿಯಲ್ಲಿ ಸಿಲುಕಿದವನಾಗಿ ಭಕ್ತಿಯಿಂದ ಪುಂಡರೀಕಾಕ್ಷನನ್ನು ನೆನೆದು ಸ್ತುತಿಸಿದನು.

**ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।**

**ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥** (ವಿ.ಪು. ೧-೧೯-೬೫)

ಭಕ್ತರ ಆರಾಧ್ಯ ದೈವನಾದ, ಗೋವು, ವೇದ, ಬ್ರಾಹ್ಮಣರಿಗೆ ಹಿತಕರನಾದ, ಜಗತ್ತಿನ ರಕ್ಷಕನಾದ, ಭೂಮಿಗಿಳಿದು ಬಂದ ಸುಖಸ್ವರೂಪಿಯಾದ ಗೋವಿಂದನೇ ನಿನಗೆ ಮತ್ತೆ ಮತ್ತೆ ನಮಸ್ಕಾರಗಳು.

ಹೀಗೆ ಬಗೆ ಬಗೆಯಿಂದ ಸ್ತುತಿಸಿದ. ಹೊರ ಪ್ರಪಂಚದಿಂದ ಸಂಪೂರ್ಣ ದೂರಾಗಿ ಭಗವಂತನ ಧ್ಯಾನದಿಂದ ತನ್ನನ್ನೇ ತಾನು ಮರೆತ. ಹೀಗೆ ಸಂಪೂರ್ಣ ಭಗವಂತನಲ್ಲಿಯೇ ಚಿತ್ತವಿಟ್ಟ ಪ್ರಹ್ಲಾದನ ಪಾಪಗಳೆಲ್ಲವೂ ದೂರಾದವು. ಶುದ್ಧವಾದ ಅಂತಃಕರಣದಲ್ಲಿ ಭಗವಂತನು ಕಾಣಿಸಿಕೊಂಡನು. ಆಗ ಸಮುದ್ರ ಮತ್ತಷ್ಟು ಉಕ್ಕೇರಿತು. ಭೂಮಿ ನಡುಗಿತು. ಪರ್ವತಗಳು ಮೇಲೆದ್ದು ಬಂದವು. ಪ್ರಹ್ಲಾದನ ನಾಗಪಾಶ ತುಂಡಾಗಿ ಬಿತ್ತು. ಆತ ಸಮುದ್ರ ತಳದಿಂದ ಮೇಲಕ್ಕೆ ಬಂದ. ಇಲ್ಲಿಯವರೆಗೆ ತನ್ನನ್ನೂ ತಾನು ಮರೆತು ಭಗವನ್ಮಯನಾಗಿದ್ದ ಆತನಿಗೆ ಜಗತ್ತನ್ನು ಕಂಡು 'ನಾನು ಪ್ರಹ್ಲಾದನು' ಎಂದು ಪ್ರಜ್ಞೆ ಮೂಡಿತು. ಮತ್ತೆ ತನ್ನೆದುರಿಗಿರುವ ಭಗವಂತನನ್ನು ಸ್ತುತಿಸಿದನು. ಈತನ ಭಕ್ತಿಯಿಂದ ಸಂತುಷ್ಟನಾದ ಹರಿಯು ವರ ಕೇಳುವಂತೆ ನುಡಿಯಲು 'ನಿನ್ನಲ್ಲಿ ಭಕ್ತಿ ಮತ್ತಷ್ಟು ವೃದ್ಧಿಯಾಗಲಿ' ಎಂದು ಪ್ರಾರ್ಥಿಸಿದನು. ಮತ್ತಷ್ಟು ವರ ಕೇಳುವಂತೆ ಶ್ರೀಹರಿಯು ನುಡಿಯಲು 'ವಿಷ್ಣು-ವೈಷ್ಣವ ದ್ವೇಷ ಮಾಡಿದ ಹಿರಣ್ಯಕಶಿಪುವಿನ ಪಾಪವು ನಾಶವಾಗಲಿ' ಎಂದು ಪ್ರಾರ್ಥಿಸಿದ. ಮತ್ತೆ ವರಬೇಡುವಂತೆ ಪ್ರಾರ್ಥಿಸಲು 'ಇಷ್ಟರಿಂದಲೇ ನಾನು ಕೃತಕೃತ್ಯನಾಗಿದ್ದೇನೆ. ನೀನು ಒಲಿದಾಗ ಮುಕ್ತಿಯೆ ಕರಗತವಾಗಲು ಇನ್ನೇನು ಬೇಕು. ನಿನ್ನಲ್ಲಿ ಭಕ್ತಿ ಹೆಚ್ಚುವಂತೆ ಅನುಗ್ರಹಿಸು' ಎಂದು ಮತ್ತೆ ಬೇಡಿದ. ಭಗವಂತ 'ಹಾಗೇಯೇ ಆಗಲಿ' ಎಂದು ನುಡಿದು ಅದೃಶ್ಯನಾದ.

ಪ್ರಹ್ಲಾದ ಮತ್ತೆ ಮನೆ ಸೇರಿದ. ಮರಳಿ ಬಂದ ಮಗನನ್ನು ತಂದೆ ಆಲಂಗಿಸಿದ. ಆನಂದ ಪಟ್ಟ. ಪ್ರಹ್ಲಾದನಾದರೋ ಗುರು ಜನರ ಶುಶ್ರೂಷೆಯನ್ನು ಮಾಡುತ್ತ ಕಾಲ ಕಳೆದ. ಮುಂದೆ ಹಿರಣ್ಯಕಶಿಪು ಇದೇ ಪ್ರಹ್ಲಾದನನ್ನು ಮತ್ತೆ ದ್ವೇಷಿಸಿ ನರಸಿಂಹರೂಪಿ ಭಗವಂತನಿಂದ ಹತನಾಗಲು ತಾನು ಸಿಂಹಾಸನವೇರಿ ರಾಜ್ಯಭಾರ ಮಾಡಿದ. ಬಳಿಕ ಅಂತ್ಯದಲ್ಲಿ ಭಗವದ್ಧ್ಯಾನದಿಂದ ಮುಕ್ತಿ ಪಡೆದ.

**(ಸಶೇಷ)**

# ರಾಹುರ್ಮೇ ರಾಹಯೇತ್ ರೋಗಾನ್

-ವಿ|| ಕುಂಭಾಸಿ ಶ್ರೀ ಶ್ರೀಪತಿ ಉಪಾಧ್ಯಾಯ

ಪುರಾಣದಲ್ಲಿ ಈ ರಾಹುವಿನ ಬಗ್ಗೆ ರೋಚಕ ಕಥೆಗಳಿವೆ. ಹಿಂದೆ ಇಂದ್ರತಾತನಾದ ಕಶ್ಯಪನನ್ನು ಸಿಂಹಿಕೆಯು ಪುತ್ರಾರ್ಥವಾಗಿ ಅಕಾಲದಲ್ಲಿ ಸಂಗಮವನ್ನು ಅಪೇಕ್ಷಿಸಿದಳು. ಅಕಾಲ ಯಾಚನೆಯಿಂದ ಕ್ರುದ್ಧನಾದ ಕಶ್ಯಪನು ದಾರುಣರಾದ ಮತ್ತು ಯಮ, ಕಾಲರನ್ನು ಹೋಲುವ ಪುತ್ರನನ್ನು ನೀಡಿದನು. ಆತನನ್ನೇ ರಾಹು ಎಂದು ಕರೆಯುವರು. ಅಸುರ ಸ್ವಭಾವದ ಈತ ಹುಟ್ಟಿದ ಕ್ಷಣದಿಂದಲೇ ರಾಕ್ಷಸರು ದೇವತೆಗಳಿಂದ ಪರಾಜಯ ಹೊಂದುವುದನ್ನು ನೋಡಿ, ಕೈಲಾಸಪರ್ವತದಲ್ಲಿ ಹತ್ತು ಸಾವಿರ ವರ್ಷಗಳ ಕಾಲ ಅತ್ಯುಗ್ರ ತಪಸ್ಸನ್ನು ಮಾಡಿದನು. ಚತುರ್ಮುಖನಿಂದ ಸ್ವರ್ಗಸಂಚಾರ ಅಮರತ್ವ, ದೇವತೆಗಳ ಜಯ, ಹಾಗೂ ಸೂರ್ಯಚಂದ್ರ ಭಕ್ಷಣವನ್ನು ವರವಾಗಿ ಪಡೆದನು. ವರಪ್ರಸಾದದಿಂದ ದೃಪ್ತನಾದ ಈತ ಅಮೃತಮಥನಕಾಲದಲ್ಲಿ ಮೋಹಿನಿ ರೂಪದಲ್ಲಿ ವಿಷ್ಣುವು ಅಮೃತವನ್ನು ದೇವತೆಗಳಿಗೆ ಮಾತ್ರ ಹಂಚುವುದನ್ನು ತಿಳಿದು ತಾನು ದೇವತೆಗಳ ಪಂಕ್ತಿಯಲ್ಲಿ ಕುಳಿತನು. ಸೂರ್ಯಚಂದ್ರರ ಮೂಲಕ ವಿಷಯ ತಿಳಿದ ವಿಷ್ಣುವು ಈತನ ಶಿರಸ್ಸನ್ನು ಸುದರ್ಶನಚಕ್ರದಿಂದ ಕತ್ತರಿಸಿದನು. ಗ್ರಹಣಕಾಲದಲ್ಲಿ ಸೂರ್ಯಚಂದ್ರ ವಿಮರ್ದನ ಮತ್ತು ಅಮರತ್ವವನ್ನು ಬ್ರಹ್ಮದೇವರ ವರದಂತೆ ಅನುಗ್ರಹಿಸಿದನು. ಶ್ರೀಹರಿಯ ಅನುಗ್ರಹದಿಂದ ಈತ ಗ್ರಹಭಾವವನ್ನು ಹೊಂದಿ ಯಜ್ಞದಲ್ಲಿ ಆಹುತಿ ಸ್ವೀಕಾರಕ್ಕೂ ಅರ್ಹನಾದನು. ಸೂರ್ಯಚಂದ್ರರ ಗ್ರಹಣಕಾಲದಲ್ಲಿ ಚಂದ್ರಮಂಡಲದಲ್ಲಿದ್ದು ಸೂರ್ಯಗ್ರಹಣಕ್ಕೂ ಹಾಗೂ ಭೂಮಿಯ ಛಾಯೆಯಲ್ಲಿದ್ದು ಚಂದ್ರಗ್ರಹಣಕ್ಕೂ ಕಾರಣನಾಗುವನು.

ಖಗೋಲ ಶಾಸ್ತ್ರದಲ್ಲಿ ಕಾಂತಿವೃತ್ತ ಮತ್ತು ವಿಕ್ಷೇಪವೃತ್ತಗಳ ಸಂಪಾತ ಬಿಂದುವಿಗೆ ಪಾತ ಎಂದು ಹೆಸರು. ರಾಶಿಚಕ್ರ ಅಥವಾ ನಕ್ಷತ್ರಗಳು ಹಾದು ಹೋಗುವ ವೃತ್ತಕ್ಕೆ ಕಾಂತಿವೃತ್ತವೆಂದೂ ಗ್ರಹಭ್ರಮಣ ವೃತ್ತಕ್ಕೆ ವಿಕ್ಷೇಪವೃತ್ತವೆಂದೂ ಹೆಸರು. ಈ ಎರಡು ವೃತ್ತಗಳು ಆರುರಾಶಿ ಅಂತರದಲ್ಲಿ ಸಂಪರ್ಕಿಸುವ ಬಿಂದುಗಳೇ ಸಂಪಾತ ಬಿಂದುಗಳು. ಕಾಂತಿವೃತ್ತದಿಂದ ಯಮ್ಯೋತ್ತರವಾಗಿ ವಿಕ್ಷಿಪ್ತವಾದ ಈ ವೃತ್ತಗಳಲ್ಲಿ ಸಂಚರಿಸುವ ಗ್ರಹರನ್ನು ನಾವು ಕಾಂತಿವೃತ್ತದಲ್ಲಿ ಗುರುತಿಸಬೇಕಾದರೆ ಗಣಿತವನ್ನು ಅದಕ್ಕಾಗಿ ಈ ಸಂಪಾತ

ಬಿಂದುಗಳನ್ನು ಅನ್ವಯಿಸಬೇಕು. ಈ ಪಾತಗಳು ವಿಮುಖವಾಗಿ ಸಂಚರಿಸುತ್ತವೆ. ಈ ವಿಕ್ಷೇಪ ವೃತ್ತಗಳಲ್ಲಿ ಚಂದ್ರ ವಿಕ್ಷೇಪವೃತ್ತ ಹಾಗೂ ಕಾಂತಿವೃತ್ತದ ಸಂಪಾತಬಿಂದುಗಳನ್ನು ನಾವು ರಾಹು ಮತ್ತು ಕೇತು ಎನ್ನುವುದಾಗಿ ಕರೆಯುತ್ತೇವೆ. ಈ ಸಂಪಾತ ಬಿಂದುವಿನ ಚಲನೆ ೩ಡಿಗ್ರಿ-೪ಡಿಗ್ರಿ (ದೈನಿಕ) ಸಾಮಾನ್ಯವಾಗಿ ೧೮ವರ್ಷಗಳಿಗೊಮ್ಮೆ ಈತನು ಒಂದು ಭಗಣವನ್ನು ಭೋಗಿಸುವನು. ಪಾತ ಚಂದ್ರನ ೧೪ಡಿಗ್ರಿಗಿಂತ ಕಡಿಮೆ ಬಂದಲ್ಲಿ ಗ್ರಹಣ ಸಂಭವವಿದೆ. ರಾಹು ಸಂಪಾತ ಬಿಂದುವಿನಲ್ಲಿ ಗ್ರಹಣವಾದರೆ ರಾಹುಗ್ರಹಣವೆಂದೂ, ಕೇತು ಸಂಪಾತ ಬಿಂದುವಿನಲ್ಲಿ ಗ್ರಹಣವಾದರೆ ಕೇತುಗ್ರಹಣವೆಂದೂ ಹೆಸರು. ಸಂಹಿತೆಯಲ್ಲಿ ಬೇರೆ ಬೇರೆ ರಾಶಿಯಲ್ಲಿ ಉಂಟಾಗುವ ಗ್ರಹಣ, ಗ್ರಸ್ತೋದಯ, ಗ್ರಸ್ತಾಸ್ತ ವಲಯ, ಖಗ್ರಾಸ ಗ್ರಹಣಗಳ ವೈವಿಧ್ಯವನ್ನೂ, ಗ್ರಹಣಕಾಲದಲ್ಲಿ ಉಂಟಾಗುವ ಉತ್ಪಾತದಿಂದ ಉಂಟಾಗುವ ಫಲವನ್ನೂ ವರ್ಣಿಸಲಾಗಿದೆ. ಹಾಗೆ ಸ್ಪರ್ಶ, ಮೋಕ್ಷಗಳ ವಿಧಗಳನ್ನೂ ಫಲಗಳನ್ನೂ ಹೇಳಲಾಗಿದೆ. ಹೀಗೆ ರಾಹಕೇತುಗಳು ಗ್ರಹಣದ ವಿಷಯದಲ್ಲಿ ಪ್ರಾಮುಖ್ಯತೆ ಪಡೆದಿರುವರು.

ಹೋರೆಯಲ್ಲಿ ಇವರನ್ನು ಛಾಯಾಗ್ರಹರೆಂದು ಕರೆಯಲಾಗಿದೆ. ಶಿಖಿ, ತಮ, ಅಸುರ, ರಾಹು, ಅಗು ಎನ್ನುವುದಾಗಿ ಈತನಿಗೆ ಹೆಸರಿದೆ. ಈತನಿಗೆ ಪರಾಶರ ಮತದಲ್ಲಿ ವೃಷಭಉಚ್ಚ, ಜಾತಕಪಾರಿಜಾತದಲ್ಲಿ ಮಿಥುನ ಉಚ್ಚ, ಹಾಗೆ ಪಾರಿಜಾತದಲ್ಲಿ ಕನ್ಯಾ ಇವನ ಸ್ವಕ್ಷೇತ್ರ. ಈತನು ಶನಿಯ, ತಾನಿರುವ ರಾಶಿಯ ಅಧಿಪತಿತ ಹಾಗೂ ತನ್ನ ಫಲವನ್ನು ನೀಡುವನು. ಈತನು ವಾಯುವ್ಯ ದಿಕ್ಕಿಗೆ ಅಧಿಪತಿಯು. ಈ ರಾಹುವು ತಾನಿರುವ ಸ್ಥಾನದಿಂದ ಧನ ಹಾಗೂ ವ್ಯಯಸ್ಥಾನವನ್ನು ನೋಡುವನೆಂದು ಹೇಳಲ್ಪಟ್ಟಿದೆ. ಕೆಲವು ಪ್ರಾಚೀನ ಗ್ರಂಥಗಳಲ್ಲಿ ೫,೭,೯ರಲ್ಲಿ ದೃಷ್ಟಿಯಿದೆ ಎಂದು ವರ್ಣಿಸಲಾಗಿದೆ. ಕಪ್ಪು ಬಣ್ಣ ದೀರ್ಘಶರೀರ, ವಿಕೃತದೇಹ, ವ್ರಣಯುಕ್ತಶರೀರ, ನಾಸ್ತಿಕವಾದ ತೊದಲುಮಾತು. ಅಸತ್ಯವಚನ, ಕುಷ್ಠಾದಿರೋಗ, ಪರನಿಂದೆ, ಬುದ್ಧಿ ಹೀನತೆ, ಈತನ ಸ್ವರೂಪವಾಗಿದೆ. ಸೀಸ, ಕಪ್ಪು ಬಟ್ಟೆಗಳಿಗೆ ಈತನು ಕಾರಕನು. ರಾಹುಕೇತುಗಳಿಗೆ ಬುಧ, ಶುಕ್ರ, ಶನಿಗಳು ಮಿತ್ರರು. ಕುಜನು ಸಮಾನನು. ಉಳಿದವರು ಶತ್ರುಗಳು. ಗೋಮೇದಿಕ ಈತನ ರತ್ನ. ಸರ್ಪ ಈತನಿಂದ ಚಿಂತಿಸಲ್ಪಡುವ ದೇವತೆ. ಪ್ರಶ್ನಾಶಾಸ್ತ್ರದಲ್ಲಿ ಈತನು ಮಹತ್ವದ ಸ್ಥಾನ ಹೊಂದಿದ್ದಾನೆ. ರವಿ ರಾಹು ಕುಜ-ಶನಿಯೋಗವು ಅತ್ಯಂತ ದುಷ್ಟ ಯೋಗವಾಗಿದೆ. ಪಂಚಮದ ರಾಹುವು ಸಂತಾನ ದೋಷಕ್ಕೆ ಕಾರಣನು. ಸಪ್ತಮಾಷ್ಟಮದ ರಾಹುವು ವೈವಾಹಿಕ ಸುಖದ ನಾಶಕ್ಕೆ ಕಾರಣನು. ಬಿಲ, ಹುತ್ತ, ಸ್ಮಶಾನ, ಈತನ ಸಂಚಾರ ಪ್ರದೇಶ.

ರಾಹು ಮಾಂದಿ ಯೋಗ ದುರ್ಮರಣದ ಸೂಚಕ. ಅಶುದ್ಧಿಯ ಪ್ರತೀಕ. ಈತನ ವರ್ಣ ಶ, ಷ, ಸ ಹ, ಳ. ಈತನು ದುಃಸ್ಥಾನದಲ್ಲಿದ್ದಾಗ ದೇಹತಾಪ, ಕುಷ್ಠವ್ಯಾಧಿ, ಚರ್ಮರೋಗ, ವಿಷಮಜ್ವರ, ಕೈವಿಷಭಯ, ಅಭಿಚಾರ, ಪಾದರೋಗ ಪಿಶಾಚ ಭಯ, ಸರ್ಪಭಯ, ಮಡದಿಮಕ್ಕಳಿಗೆ ಆಪತ್ತು. ಬ್ರಾಹ್ಮಣಕ್ಷತ್ರಿಯರ ವಿರೋಧ, ವಿಧರ್ಮಾಶ್ರಿತರ ಸಹವಾಸ, ಉಬ್ಬಸ, ಗಂಟುರೋಗ, ಕಣ್ಣುಗಳಿಗೆ ಬಾಧೆಯನ್ನುಂಟುಮಾಡುತ್ತಾನೆ. ವಿಷಜಂತುಗಳ ಹಾಗು ವಿಶೇಷವಾಗಿ ಸರ್ಪಶಾಪ, ಸರ್ಪಬಾಧೆಯನ್ನು ಸೂಚಿಸುವನು. ಆರ್ದ್ರಾ ಸ್ವಾತಿ, ಶತಭಿಷಾ ನಕ್ಷತ್ರಗಳಲ್ಲಿ ಈತನ ದೆಶೆಯು ಆರಂಭವಾಗುತ್ತದೆ. ದಶಾವರ್ಷ ೧೮. ಸುಖನಾಶ, ಧನನಾಶ, ಸ್ಥಿತಿನಾಶ, ಪತ್ನೀ ಪುತ್ರವಿಯೋಗ, ಅತಿರೋಗ ಪರದೇಶವಾಸ ವಿವಾದಬುದ್ಧಿಯನ್ನುಂಟುಮಾಡುತ್ತಾನೆ. ಕನ್ಯಾ, ಧನು ಮೀನರಾಶಿಯ ರಾಹುದೆಶೆಯಲ್ಲಿ ಪ್ರಾರಂಭದಲ್ಲಿ ಶುಭವಾಗುವುದು. ಕರ್ಕಾಟಕ, ಮೇಷ, ವೃಷಭರಾಹುವು ಶುಭಪ್ರದನು. ಮಕರ ಕನ್ಯಾರಾಶಿಯ ರಾಹುವು ಶುಭನೇ. ಆದರೆ ದಶಾಂತ್ಯದಲ್ಲಿ ಪಿತೃನಾಶ, ಪದಚ್ಯುತಿಯಿಂದ ಸರ್ವನಾಶವಾಗುವುದು.

ಗರಿಕೆ ಹುಲ್ಲು, ಈತನ ಸಮಿಧಿ ಪರ್ವತಗಳ ಕಣಿವೆ, ದ್ರಾವಿಡದೇಶ, ಮ್ಲೇಂಛ ಜನರು, ಸುಟ್ಟಮಾಂಸ, ಶವ, ಉದ್ದು, ಅರಬೀಯ ದೇಶಸ್ಥರು, ಅನುಮೋಮವಿಲೋಮ ಸಂಬಂಧ, ಚೋರ, ಅಂಗವೈಕಲ್ಯ ಉಳ್ಳವರು, ಅಭಿಚಾರಕ್ರಿಯೆ, ದಾನಶೂನ್ಯತೆ, ನಾಸ್ತಿಕವಾದ, ಸಮತಾವಾದ, ಅಪಸ್ಮಾರ, ಗೋಮೇದಿಕಾ ಮಣಿ, ಕತ್ತೆ ಸವಾರ, ಗರ್ಭಾಶಯ, ನರಿ, ಮಲ್ಲ ಯುದ್ಧ, ಅವಮಾನ ಮಾಲಿನ್ಯ, ಅಜ್ಜ ಇವರಿಗೆಲ್ಲ ಕಾರಕನು.

ಸರ್ಪಫಣ ಪೂಜೆ, ನಾಗನಿಗೆ ಪಂಚಾಮೃತ ಪೂಜೆ, ಸರ್ಪಮಂತ್ರ ಜಪ, ಮೂಲಮಂತ್ರ ಜಪ, ಗಾಯತ್ರೀ ಮಂತ್ರ ಜಪ, ನಾಗನಿಗೆ ಸವಿತೃಕಲಶ, ಪವಮಾನಕಲಶ, ಸಂಹಿತಾಕಲಶ, ಸುಬ್ರಹ್ಮಣ್ಯಯಾತ್ರೆ, ಕಾಳಹಸ್ತಿಯಾತ್ರೆ, ನಾಗಪ್ರತಿಷ್ಠೆ, ಆಶ್ಲೇಷಬಲಿ, ಸರ್ಪಸಂಸ್ಕಾರ ಸರ್ಪಸೂಕ್ತಹೋಮ, ಪವಮಾನ ಹೋಮ, ತಿಲಹೋಮ, ಕೂಷ್ಮಾಂಡಹೋಮ, ಕಾಲಮೃತ್ಯುಂಜಯ ಹೋಮ, ಮೂಲಮಂತ್ರಹೋಮ, ನಾಗನಿಗೆ ತನು-ತಂಬಿಲಸೇವೆ, ಹರಿದ್ರಸಮರ್ಪಣೆ, ಹಾಲಿಟ್ಟು, ನಾಗಮಂಡಲ, ಸ್ವರಸೇವೆ, ನೃತ್ಯಸೇವೆ, ಲಾವಂಚ ಕೇದಿಗೆ ಸಮರ್ಪಣೆ, ರಾಹುಮಂತ್ರ ೧೮ ಸಾವಿರ ಜಪ, ನವಗ್ರಹಹೋಮ, ರಾಹುಮಂತ್ರ ಹೋಮ. ದುರ್ದಾನ ಪಂಚಕ, ಚಂಡಾಲಬಲಿ, ಮಾಷಾನ್ನದಿಂದ ಹೋಮ, ತ್ರಿಮಧ್ವಾಕ್ತ ದೂರ್ವಾಹೋಮದಿಂದ ರಾಹುದೋಷ ಪರಿಹಾರವಾಗುವುದು.

★

# ಮಹಾಭಾರತತಾತ್ಪರ್ಯನಿರ್ಣಯ ಪ್ರಕಾಶನ

ಸರ್ವಜ್ಞ ಸೂರ್ಯ ಭಗವಾನ್ ವೇದವ್ಯಾಸರು ಸರ್ವೋತ್ತಮ ನಾರಾಯಣನ ಸಾಕ್ಷಾತ್ ಅವತಾರ. ಸತ್ಯವತೀ-ಪರಾಶರರ ಸುಕುಮಾರರಾಗಿ ಪ್ರಕಟಗೊಂಡು ವೇದವಿಭಾಗ, ಹಾಗೂ ಹದಿನೆಂಟು ಪುರಾಣಗಳ ರಚನೆ ಮಾಡಿದ ಅಸಮಾನ ಧೀಮಂತಿಕೆಯ ಮಹಾಮುನಿ ವೇದವ್ಯಾಸರು.

ಸರ್ವೋತ್ತಮ ಮುನಿಯ ಸರ್ವೋತ್ತಮ ಕೃತಿ **ಮಹಾಭಾರತ**. ಅಪ್ರಮೇಯನ ಪ್ರಮೇಯಮಹಿಮೆಗಳನ್ನು ಅನುಪಮ ರೀತಿಯಲ್ಲಿ ವರ್ಣಿಸಿಯೂ ಅವನು ಅವರ್ಣನೀಯನೆಂದೇ ವರ್ಣಿಸುವ ಮಹಾಭಾರತ ಎಲ್ಲರಿಗೂ ಸುಲಭಗ್ರಾಹ್ಯವಾಗದ ಗಹನಗ್ರಂಥ. **'ಇಲ್ಲಿ ಏನಿಲ್ಲ ಅದು ಎಲ್ಲೂ ಇಲ್ಲ. ಇಲ್ಲಿ ಏನಿದೆ ಅದೇ ಎಲ್ಲೆಡೆ ಇರುವುದು'** ಎಂಬುದು ಇದರ ಅಸಾಧಾರಣ ಹೆಗ್ಗಳಿಕೆ. ಅಪ್ರಬುದ್ಧ ಅರ್ವಾಚೀನ ಹವ್ಯಾಸಿ ವ್ಯಾಸರ ಹಸ್ತಕ್ಷೇಪ ಪ್ರಕ್ಷೇಪ ವಿಕ್ಷೇಪಗಳಿಂದ ಮಹಾಭಾರತ ಅರ್ಥವಾಗದಂತಾದಾಗ ವೇದವ್ಯಾಸರ ಆಜ್ಞೆಯಿಂದಲೇ ಅವರ ತಾತ್ಪರ್ಯನಿರ್ಣಯವನ್ನು ನಿರೂಪಿಸುವ ಜೀವೋತ್ತಮ ಮಾರುತಾವತಾರ ಮಧ್ವಾಚಾರ್ಯರ ಮೇರು ಕೃತಿರತ್ನ **'ಮಹಾಭಾರತತಾತ್ಪರ್ಯ ನಿರ್ಣಯ'** ಶಾಸ್ತ್ರದ ಮೂಲ ಸಿದ್ಧಾಂತ, ರಾಮಾಯಣ, ಮಹಾಭಾರತ, ಹರಿವಂಶ, ಭಾಗವತ, ವಿಷ್ಣುಪುರಾಣಗಳ ನಿರ್ಣಯಗಳಲ್ಲದೆ ಎಲ್ಲ ಶಾಸ್ತ್ರಪುರಾಣಗಳನ್ನು ಅರ್ಥೈಸುವ ಪರಿಯನ್ನು ಹಾಗೂ ಗೊಂದಲವಿಲ್ಲದೆ ವ್ಯಾಸಭಾವನಿರ್ಣಯಗಳನ್ನು ಪರಿಚಯಿಸುವ ಪವಿತ್ರಗ್ರಂಥ. ಅಷ್ಟಲ್ಲದೆ ಜೀವನದ ಯಾವುದೇ ಸಂದಿಗ್ಧ, ಸಂಕೀರ್ಣದ ಸಂದರ್ಭಗಳಲ್ಲಿಯೂ ಖಚಿತ ನಿರ್ಣಯವನ್ನು ಭಕ್ತಭಾವುಕರಿಗೆ ಒದಗಿಸಬಲ್ಲ ಮೌನದಿಂದಲೇ ಮಾತನಾಡುವ ಅತ್ಯಾಶ್ಚರ್ಯ ಗ್ರಂಥ.

ಶ್ರೀಮಧ್ವಾಚಾರ್ಯರು ಭಾಗವತ ಪ್ರವಚನ ಮಾಡುತ್ತಿದ್ದಾಗ ಭಾಗವತವಾಚನವನ್ನು ಮಾಡುತ್ತಿದ್ದ ಅವರ ಮುಖದಿಂದಲೇ ನೇರವಾಗಿ ಶುದ್ಧ ಪಾಠ ಹಾಗೂ ಭಾವಗಳನ್ನು ಕೇಳಿ ತಿಳಿದು ಪುನೀತರಾದ ಅವರ ಪ್ರೀತಿಯ ಶಿಷ್ಯ ಶ್ರೀ ಹೃಷೀಕೇಶತೀರ್ಥರು ಬರೆದಿಟ್ಟ ಈಗಲೂ ಉಪಲಬ್ಧವಿರುವ ಅತಿ ಪ್ರಾಚೀನ ತಾಡಾವಾಲೆಯಲ್ಲಿರುವ ತುಳುಲಿಪಿಯ ಶುದ್ಧಪಾಠದ ಮಹಾಭಾರತತಾತ್ಪರ್ಯನಿರ್ಣಯ ಗ್ರಂಥವು ಸಂಸ್ಕೃತದಲ್ಲಿ ಶ್ರೀವೇದಾಂಗತೀರ್ಥರ ವ್ಯಾಖ್ಯಾನದೊಂದಿಗೆ ಇದೀಗ ಹೃಷೀಕೇಶತೀರ್ಥ ಸಂಸ್ಥಾನದ ಪಲಿಮಾರು ಮಠದಿಂದ ಪ್ರಕಾಶನಗೊಳ್ಳುತ್ತಿದೆ.

ಶ್ರೀಮಧ್ವಾನುಜ ಶ್ರೀವಿಷ್ಣುತೀರ್ಥರ ಭವ್ಯಪರಂಪರೆಯಲ್ಲಿ ಹೊಮ್ಮಿ ಬಂದ ಹೊನ್ನ ವ್ಯಕ್ತಿತ್ವದ ಶ್ರೀವೇದಾಂಗತೀರ್ಥರು ಬರೆದ ಈ ತನಕ ಮುದ್ರಣವಾಗದ ಅಪೂರ್ವ ಪ್ರಾಚೀನ ವ್ಯಾಖ್ಯಾನದೊಂದಿಗೆ ಪ್ರಕಾಶನಗೊಳ್ಳುತ್ತಿರುವುದು ವಿಶೇಷ. ಶ್ರೀಮದ್ವವಿಜಯ ಗ್ರಂಥಕ್ಕೂ ಇವರದೇ ಪ್ರಾಚೀನ ವ್ಯಾಖ್ಯಾನವಿದ್ದು ಇತ್ತೀಚೆಗೆ ಶ್ರೀ ಬನ್ನಂಜೆಯವರ ಟಿಪ್ಪಣಿಯೊಂದಿಗೆ ಪ್ರಕಟಗೊಂಡದ್ದು ಜಿಜ್ಞಾಸುಗಳಿಗೆ ತಿಳಿದಿರುವ ಸಂಗತಿಯಾಗಿದೆ.

ಈ ಪ್ರಕಾಶನದ ಮತ್ತೊಂದು ವಿಶೇಷವೆಂದರೆ ಭಾವಾವೇಶಗಳನ್ನು ಬದಿಗಿಟ್ಟು ವಸ್ತುನಿಷ್ಠವಾಗಿ ಮಧ್ವನಿಷ್ಠೆಯಿಂದ ಶಾಸ್ತ್ರಗ್ರಂಥಗಳ ಸೂಕ್ಷ್ಮ ಸಂವೇದನೆಯ ಸಂಶೋಧನೆ ಮಾಡುವ ಕಣ್ಣೆದುರಿಗಿರುವ ಅಪರೂಪದ ಅಪೂರ್ವ ವಿದ್ವಾಂಸರಾದ ವಿದ್ಯಾರತ್ನಾಕರ, ವಿದ್ಯಾವಾಚಸ್ಪತಿ ಶ್ರೀಬನ್ನಂಜೆ ಗೋವಿಂದಾಚಾರ್ಯರು ಬರೆದಿರುವ **'ನಿರ್ಣಯ-ಭಾವಚಂದ್ರಿಕಾ'**

ಎಂಬ ಅದ್ಭುತ ವ್ಯಾಖ್ಯಾನದೊಂದಿಗೆ ಅವರ ಸಂಪಾದಕತ್ವದಲ್ಲಿಯೇ ಪ್ರಕಾಶಗೊಳ್ಳುತ್ತಿರುವುದು.

ಅನೇಕ ಪ್ರಾಚೀನ ವ್ಯಾಖ್ಯಾನಗಳು ಈಗಾಗಲೇ ತಾತ್ಪರ್ಯನಿರ್ಣಯಕ್ಕೆ ರಚಿತಗಳಾಗಿದ್ದು ಪ್ರಕಾಶಿತಗಳೂ ಆಗಿವೆ. ಆದರೂ ಯಾವ ವ್ಯಾಖ್ಯಾನದಿಂದಲೂ ಗತಾರ್ಥವಾಗದೇ ಅಪೂರ್ವ ಅರ್ಥ ಹಾಗೂ ಭಾವಗಳ ಉದ್ಬೋಧಕವೂ ಆಗಿದೆ ಬನ್ನಂಜೆಯವರ ವ್ಯಾಖ್ಯಾನ. ಆಚಾರ್ಯರು ಪ್ರಯೋಗಿಸಿದ ಚ, ತು ಮುಂತಾದ ಪ್ರತಿಯೊಂದು ಅಕ್ಷರ, ಪ್ರತಿಯೊಂದು ಉಪಸರ್ಗಗಳಿಗೂ ಅರ್ಥವಿಶೇಷಗಳನ್ನು ತಿಳಿಸುವ ಅಪೂರ್ವತೆ ವಿಸ್ಮಯಕಾರಿಯಾಗಿದೆ. ಆಚಾರ್ಯರು ಉಪಯೋಗಿಸಿರುವ ಛಂದಸ್ಸುಗಳು, ಬಳಸಿರುವ ವೃತ್ತಗಳಿಂದಲೂ ಹೊಮ್ಮುವ ನೂತನ ಭಾವಾವಿಷ್ಕಾರಗಳು ಮನೋಹರವಾಗಿವೆ.

ವ್ಯಾಸರು ಹಾಗೂ ಮಧ್ವರು ಬಳಸಿರುವ ಅಪಾಣಿನೀಯ ಶಬ್ದಗಳ ಸಾಧುತ್ವಗಳನ್ನು ತಿಳಿಸಲೋಸುಗವೇ ಹೊಸೆದಿರುವ ಹೊಸ ವ್ಯಾಕರಣ ಸೂತ್ರಗಳು ವಿವರಣೆಯೊಂದಿಗೆ ಪರಿಶಿಷ್ಟದಲ್ಲಿವೆ. ಹಿಂದೆ ಪ್ರಾಣಸೂತ್ರಗಳನ್ನು ರಚಿಸಿದ್ದ ಬನ್ನಂಜೆಯವರಲ್ಲಿ ಶಬ್ದಸೂತ್ರಗಳನ್ನು ರಚನೆ ಮಾಡಿರುವುದು ಅವರ ಸರ್ವಂಕಷ ಪಾಂಡಿತ್ಯದ ಪ್ರತಿಭಾಪ್ರಭೆಯು ಅನಾವರಣವಾಗಿದೆ. ನಿರ್ಣಯದಲ್ಲಿ ಬಂದ ಭಾರತದಲ್ಲಿ ಬಂದ ದೇಶನಾಮಗಳು ವ್ಯಕ್ತಿ ನಾಮಗಳು ಅದರ ಅರ್ಥನಿರ್ವಚನ ಹಾಗೂ ಹಿನ್ನಲೆಗಳು ತುಂಬ ನಾಜೂಕಾಗಿ ನಿರೂಪಿತವಾಗಿವೆ. ವಿಸ್ತಾರವಾದ ಭೂಮಿಕೆ ಆಚಾರ್ಯರ ಹಾಗೂ ತಾತ್ಪರ್ಯನಿರ್ಣಯದ ಹಿರಿಮೆ-ಗರಿಮೆಗಳನ್ನು ಸುಂದರವಾಗಿ ವಿವರಿಸುತ್ತದೆ. ಸುಮಾರು ೧೬೦೦ ಪುಟಗಳ ಈ ಪುಸ್ತಕವು ಏಕಕಾಲದಲ್ಲಿ ಎರಡು ಭಾಗಗಳಲ್ಲಿ ಮುದ್ರಣಗೊಳ್ಳುತ್ತಿದೆ. ೫,೬, ಡಿಸೆಂಬರ್ ೨೦೦೯ ಶನಿವಾರ, ಭಾನುವಾರಗಳಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಅನೇಕ ಪೀಠಾಧಿಪತಿಗಳ ದಿವ್ಯ ಸಾನ್ನಿಧ್ಯದಲ್ಲಿ ಪ್ರಕಟಗೊಳ್ಳುತ್ತಿದೆ. ತತ್ವಸಂಶೋಧನ ಸಂಸತ್, ಪಲಿಮಾರು ಮಠ, ಉಡುಪಿ ಇವರ ವತಿಯಿಂದ ಗ್ರಂಥಪ್ರಕಾಶನವು ನಡೆಯುತ್ತದೆ. ಇದಕ್ಕಾಗಿ ಪಲಿಮಾರು ಮಠಾಧೀಶ ಶ್ರೀವಿದ್ಯಾಧೀಶತೀರ್ಥರನ್ನು ಅಭಿನಂದಿಸುತ್ತೇವೆ. ★


**ತತ್ವಸಂಶೋಧನ ಸಂಸತ್, ಪಲಿಮಾರು ಮಠ, ಉಡುಪಿ**

ಶ್ರೀ ಹೃಷೀಕೇಶತೀರ್ಥರ ಸಂಶೋಧಿತ ಮೂಲ ಪಾಠದೊಂದಿಗೆ ಶ್ರೀ ವೇದಾಂಗತೀರ್ಥರ ವ್ಯಾಖ್ಯಾನ

ಮತ್ತು ಬನ್ನಂಜೆಯವರ ತಾತ್ಪರ್ಯಭಾವಚಂದ್ರಿಕಾ ವ್ಯಾಖ್ಯಾನದೊಂದಿಗೆ

ಬನ್ನಂಜೆ ಗೋವಿಂದಾಚಾರ್ಯರ ಸಂಪಾದಕತ್ವದಲ್ಲಿ

**ಶ್ರೀ ಮದಾನಂದತೀರ್ಥರ ಮಹಾಭಾರತತಾತ್ಪರ್ಯನಿರ್ಣಯವು (ಸಂಸ್ಕೃತ)**

ದಿನಾಂಕ ೦೬-೧೨-೦೯ರಂದು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಬಿಡುಗಡೆಯಾಗಲಿದೆ.

ಪುಟಗಳು: ಸುಮಾರು ೧,೬೦೦ (ಕ್ರೌನ್ ೧/೪)

ಪ್ರಕಾಶನ ಪೂರ್ವಬೆಲೆ ರೂ. ೧,೦೦೦/- ಪ್ರಕಾಶನದ ನಂತರ ರೂ. ೧,೫೦೦/-

ಪುಸ್ತಕವನ್ನು ಕಾದಿರಿಸಲು 'ತತ್ವಸಂಶೋಧನ ಸಂಸತ್,' ಸಿಂಡಿಕೇಟ್ ಬ್ಯಾಂಕ್ ರಥಬೀದಿ, ಉಡುಪಿ.

ಅಕೌಂಟ್ ನಂ. ೦೧೧೯೨೦೧೦೦೦೦೦೫೩ ಇದಕ್ಕೆ ಡಿ.ಡಿ./ ಚೆಕ್ ಕಳುಹಿಸಲು ವಿನಂತಿ.

ಹೆಚ್ಚಿನ ಮಾಹಿತಿಗಾಗಿ: ೦೮೨೦-೨೫೨೩೪೦೨ ಮತ್ತು **www.palimarumatha.org**

ಭಾಗ-೬

# ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ

**-ಶ್ರೀ ಡಿ. ಗುರುಪ್ರಸಾದ್ ಭಟ್**

ಶ್ರೀಕೃಷ್ಣನ ವಿಶ್ವರೂಪದ ಸ್ವರೂಪವನ್ನು ಅರ್ಜುನ ಕಾಣುವ ಸಂದರ್ಭದಲ್ಲಿ ಆಶ್ಚರ್ಯಗಳ ನೋಟಗಳ ಜೊತೆಗೆ ತಾನೂ ಆಶ್ಚರ್ಯಚಕಿತನಾಗುತ್ತಾನೆ. ಎಣಿಕೆಗೆ ಸಿಗದ ಬಾಯಿಯನ್ನು ಕಂಡು, ತಾನೂ ಬಾಯಿ ಬಿಡಲಾಗದೆ ಬೆರಗಾಗುತ್ತಾನೆ. ಯಾಕೆಂದರೆ ಬಾಲ್ಯದಲ್ಲಿ ವಿಶ್ವರೂಪವನ್ನು ಯಶೋದೆಗೆ ತೋರಿಸಿದ ಬಾಯಲ್ಲವೇ ಅದು? ಆ ಬಾಯಿಯೂ ಜ್ಞಾನಾನಂದಮಯವಾದ್ದರಿಂದ ಅರ್ಜುನ ಅಚ್ಚರಿಗೊಂಡ! ಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಎಲ್ಲಾ ೨೪ ತತ್ವಗಳಲ್ಲಿ ಈ ವಾಕ್‌ತತ್ವ ಎಂಬುದು ಪ್ರಧಾನವಾಗಿದೆ ತಾನೇ? ಯಾಕೆಂದರೆ ವಾಗೀಂದ್ರಿಯವು ಜ್ಞಾನೇಂದ್ರಿಯವೂ ಹೌದು. ಕರ್ಮೇಂದ್ರಿಯವೂ ಹೌದು. **'ರಸೋಹಮಪ್ಸು ಕೌಂತೇಯ'** ಎಂಬಂತೆ ವಿಶೇಷವಾಗಿ ರಸದ ಅನುಭವವನ್ನು ಭಗವಂತ ರಸನೇಂದ್ರಿಯದ ಮೂಲಕ ತಿಳಿಯುವಂತೆ ಮಾಡುವುದರ ಜೊತೆಗೆ, ಅದೇ ಇಂದ್ರಿಯಕ್ಕೆ ಮಾತನಾಡುವ ಶಕ್ತಿಯನ್ನು ಕೊಟ್ಟ. ಆದ್ದರಿಂದ ಬಾಯಿಯ ಒಳಗಡೆನೇ ಈ ಎರಡೂ ಇಂದ್ರಿಯವೂ ಇರುವುದರಿಂದ ಇಂತಹ ಬಾಯಿಯನ್ನು ಕಂಡ ಅರ್ಜುನ ಬಾಯಿ ಬಿಡುತ್ತಾನೆ. **' ಯೋಮಾಂ ಪಶ್ಯತಿ ಸರ್ವತ್ರ, ಸರ್ವಂಚ ಮಯಿ ಪಶ್ಯತಿ'** ಎಂಬುದಾಗಿ ಹಿಂದಿನ ಅಧ್ಯಾಯಗಳಲ್ಲಿ ಉಪದೇಶಿಸಿದ ಪ್ರಕಾರ ಅರ್ಜುನ ಎಲ್ಲರ ಬಾಯಲ್ಲೂ ಆ ವಿಶ್ವನನ್ನು ಕಂಡ, ವಿಶ್ವನಲ್ಲಿ ಎಲ್ಲರ ಬಾಯನ್ನೂ ಕಂಡ.

ಇನ್ನು ಎಣಿಕೆಗೆ ಸಿಗದ ಕಣ್ಣುಗಳ ರೂಪವನ್ನು ಕಂಡ. ಎಲ್ಲಾ ಜೀವರುಗಳಿಗೂ ರೂಪವನ್ನು ಕಾಣಲು ಕಣ್ಣಿನ ಆವಶ್ಯಕತೆವಿದೆ ತಾನೆ? ರೂಪಜ್ಞಾನವು ಬೇರೆಯಾವ ಇಂದ್ರಿಯದಿಂದಲೂ ಗೋಚರವಾಗುವುದಿಲ್ಲವೆಂಬುದು ಅನುಭವಸಿದ್ಧ. **'ಪ್ರಭಾಽಸ್ಮಿ ಶಶಿಸೂರ್ಯಯೋಃ'** ಎಂಬುದಾಗಿ ಹಿಂದಿನ ವಿಭೂತಿ ಅಧ್ಯಾಯದಲ್ಲೇ ಕೃಷ್ಣ ಸೂರ್ಯ ಚಂದ್ರರಲ್ಲಿರತಕ್ಕ ಪ್ರಭೆ ತಾನೇ ಅಂದಿದ್ದಾನೆ ಅಲ್ಲವೇ? ಈ ಸೂರ್ಯ ಚಂದ್ರರೇ ಕಣ್ಣಿನ ಅಭಿಮಾನಿ ದೇವತೆಗಳು ತಾನೇ? **'ಯಚ್ಚಂದ್ರಮಸಿಯಚ್ಚಾಗ್ನೌ ತತ್ತೇಜೋ ವಿಧಿ ಮಾಮಕಂ'** ಎಂಬಂತೆ ಆ

ಸೂರ್ಯಚಂದ್ರರ ಒಳಗಿದ್ದು ಅವರಿಗೂ ಬೆಳಕನ್ನು ಕೊಡತಕ್ಕವನು ಅವನೇ ಅಲ್ಲವೆ? **'ನ ತದ್ ಭಾಸಯತೇ ಸೂರ್ಯೋ ನಶಶಾಂಕೋ ನ ಪಾವಕಃ'** ಎಂಬಂತೆ ಸೂರ್ಯ ಚಂದ್ರ ಅಗ್ನಿಗಳೆಂಬ ಮೂರು ಪ್ರಕಾಶಕ ಶಕ್ತಿಗಳು ಸ್ವತಂತ್ರವಾಗಿ ಸ್ವತಃ ಬೆಳಗಲಾರವು. ಆದ್ದರಿಂದ ಒಂದು ಪಕ್ಷದಲ್ಲಿ ಭಗವಂತ ಜಡ ವಿಶ್ವವನ್ನು ಸೃಷ್ಟಿಸಿ, ಕತ್ತಲಮಯವನ್ನಾಗಿ ಮಾಡುತ್ತಿದ್ದಲ್ಲಿ ನಮಗೆ ಕಣ್ಣಿದ್ದೂ ಏನೂ ಗೋಚರಿಸುವಂತಿರಲಿಲ್ಲ. ಈ ವಿಶ್ವವನ್ನು ಸೃಷ್ಟಿಸಿದನಂತರ, ಪ್ರಕಾಶಮಯವಾದ ಸೂರ್ಯ, ಚಂದ್ರರನ್ನು ಸೃಷ್ಟಿಸಿದ. ತಾನೂ ಅವರೊಳಗಿದ್ದು ಬೆಳಗಿದ. ನಮಗೂ ಕಣ್ಣುಗಳನ್ನು ಅನುಗ್ರಹಿಸಿದ. ಆ ಕಣ್ಣುಗಳ ಒಳಗೆ ಇದ್ದು ಕಣ್ಣುಗಳಿಗೆ ಕಾಣುವ ಶಕ್ತಿಯನ್ನು ಕೊಟ್ಟ. ಕಾಣುವಂತಾಗಲು ಈ ವಿಶ್ವಕ್ಕೂ ರೂಪ ಕೊಟ್ಟ. ವಿಶ್ವದೊಳಗೂ ನಿಂತ. ಆ ರೂಪವನ್ನು ಕಾಣಲು ಸೂರ್ಯ, ಚಂದ್ರರನ್ನು ಸೃಷ್ಟಿಸಿದ. ಸೂರ್ಯ ಚಂದ್ರರಿಂದ ಬೆಳಗಿದ ವಿಶ್ವವನ್ನು ಕಾಣಲೂ ನಮ್ಮ ಕಣ್ಣಿಗೂ ಆ ಶಕ್ತಿಯನ್ನು ಕೊಟ್ಟ ತಾನೇ? ಒಟ್ಟಾಗಿ ವಿಶ್ವರೂಪನಾಗಿ ನಿಂತು ಎಲ್ಲರನ್ನೂ, ಎಲ್ಲವನ್ನು ಬೆಳಗುವವನು ಅವನೇ ಅಲ್ಲವೆ? ಈ ವಿಚಾರಗಳನ್ನೇ ಹಿಂದೆ ಗೀತೆಯಲ್ಲಿ ಅಧಿಭೂತ, ಅಧಿದೈವ ವೆಂಬ ಪ್ರಕರಣದಲ್ಲೆ ತಿಳಿಸಿರುತ್ತಾರೆ.

ನಮಗೂ ಬಾಯಿ ಇದೆ, ಕಣ್ಣಿದೆ. ಆದರೆ ಯಾಕೆ ಇದೆ? ಅವುಗಳ ಪ್ರಯೋಜನ, ಉಪಕಾರವೇನು? ಎಂಬುದು ತಿಳಿದೇ ಇಲ್ಲ. ಅವುಗಳ ಮಹತ್ವಜ್ಞಾನವಿಲ್ಲದೇ ಪಶುಗಳಾಗಿ ಬದುಕುತ್ತಿದ್ದೇವೆ. ಕಣ್ಣು ಇದ್ದೂ ಕುರುಡರು, ಬಾಯಿ ಇದ್ದೂ ಮೂಕರಾಗಿ ಕಾಲಹರಣ ಮಾಡುತ್ತಿದ್ದೇವೆ. ನಿಜವಾಗಿ ನಮಗೆ ಇದೆಲ್ಲಾ ತಿಳಿಯದಿರುವುದೇ ಒಂದು ದೊಡ್ಡ ಅಚ್ಚರಿಯ ಸಂಗತಿಯಾಗಿದೆ. ಅದಕ್ಕೋಸ್ಕರವೇ ಕೃಷ್ಣ ಎರಡನೇ ಅಧ್ಯಾಯದಲ್ಲಿ

**'ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಂ, ಆಶ್ಚರ್ಯವದ್ ವದತಿ ತಥೈವ ಚಾನ್ಯಃ'।**
**'ಆಶ್ಚರ್ಯ ವಚ್ಚೈನ ಮನ್ಯಃ ಶೃಣೋತಿ, ಶ್ರುತ್ವಾಪ್ಯೇನಂ ವೇದ ನ ಚೈವ ಕಶ್ಚಿತ್'**॥

ಅಂದಿದ್ದಾನೆ. ಭಗವಂತನ ಬಗ್ಗೆ ಎಷ್ಟೇ ಕೇಳಿದರೂ ಕೂಡ, ಯಾರೊಬ್ಬರೂ ಕೂಡ, ಅವನ ಬಗ್ಗೆ ತಿಳಿದವರಿಲ್ಲ. ಅದೊಂದು ಆಶ್ಚರ್ಯ! ಅಷ್ಟೆ ಅನ್ನುತ್ತಾನೆ. ನಾವೂ ಕೂಡ ಭಗವಂತನ ಅರಿವನ್ನು ಪಡೆಯುತ್ತಿರುವುದರ ಮೂಲಕ ಆಶ್ಚರ್ಯ ಪಡೋಣ. ಆನಂದಪಡೋಣ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರರಾಗೋಣ.

★

ಜಿಜ್ಞಾಸೆ

# ಅಯನಗಳ ಆರಂಭ

– ಜಯಂತ ವ್ಯಾಸನಕೆರೆ

ವರ್ಷದಲ್ಲಿ ಎರಡು ಅಯನಗಳು: ಉತ್ತರಾಯಣ ಮತ್ತು ದಕ್ಷಿಣಾಯನ. ಕೆಲವರು Jan ೧೪/೧೫ ರಿಂದ July ೧೫/೧೬ ರ ವರೆಗೆ ಉತ್ತರಾಯಣವೆಂದೂ, ವರ್ಷದ ಉಳಿದರ್ಧವನ್ನು ದಕ್ಷಿಣಾಯನವೆಂದೂ ಆಚರಿಸುವುದುಂಟು. ಇನ್ನು ಕೆಲವರು Dec ೨೧/೨೨ ರಿಂದ June ೨೦/೨೧ ರ ವರೆಗೆ ಉತ್ತರಾಯಣವೆಂದೂ, ಉಳಿದರ್ಧವನ್ನು ದಕ್ಷಿಣಾಯನವೆಂದೂ ಆಚರಿಸುತ್ತಾರೆ. ಈ ವಿಷಯದ ಬಗ್ಗೆ ಪ್ರತ್ಯಕ್ಷದ ನಿಲುವನ್ನು ಇಲ್ಲಿ ಸಮರ್ಥಿಸಲಾಗಿದೆ[೧].

ಸಾಮಾನ್ಯವಾಗಿ ದಿಕ್ಕುಗಳು ನಾಲ್ಕು, ಸೂರ್ಯನು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುತ್ತಾನೆ ಎಂಬುದಾಗಿ ವ್ಯವಹರಿಸುತ್ತೇವೆ. ಸೂಕ್ಷ್ಮವಾಗಿ ಗಮನಿಸಿ ಹೇಳುವುದಾದರೆ ವರ್ಷದುದ್ದಕ್ಕೂ ಸೂರ್ಯೋದಯ ಹಾಗೂ ಸೂರ್ಯಾಸ್ತಗಳು ಕ್ರಮವಾಗಿ ಪೂರ್ವ ಹಾಗೂ ಪಶ್ಚಿಮದ ಬಳಿ ಬದಲಾವಣೆಯಾಗುತ್ತಿರುತ್ತವೆ.




ಚಿತ್ರದಲ್ಲಿ ನಾವು ‘O’ ಎಂಬಲ್ಲಿದ್ದೇವೆ ಎಂದುಕೊಳ್ಳಿ. ವರ್ಷದಲ್ಲಿ ಸೂರ್ಯೋದಯವು ಪೂರ್ವಕ್ಕೆ ೨೩.೫⁰ ದಕ್ಷಿಣದಿಂದ ೨೩.೫⁰ ಉತ್ತರದವರೆಗೆ

[೧] ಸೂರ್ಯಕೇಂದ್ರೀಯ (heliocentric) ಹಾಗೂ ಭೂಕೇಂದ್ರೀಯ (geocentric) ಪದ್ಧತಿಗಳು ಸಮಾನ ಫಲಿತಾಂಶ ನೀಡುವುದರಿಂದ ಸರಳತೆಗಾಗಿ ಇಲ್ಲಿ ಪ್ರಧಾನವಾಗಿ ಭೂಕೇಂದ್ರೀಯ ಪದ್ಧತಿಯನ್ನು ಅಳವಡಿಸಲಾಗಿದೆ. ಹಾಗೂ ಇಲ್ಲಿನ ಉದಯಾಸ್ತಮಾನದ ವಿಷಯಗಳು ಸಮಭಾಜಕವೃತ್ತದ (equator) ಬಳಿ ನಿಖರವಾಗಿದ್ದು ಇತರೆಡೆ ಸೂಕ್ತ ವ್ಯತ್ಯಾಸ ಹೊಂದುತ್ತವೆ.

ದಿನದಿನಕ್ಕೆ ವ್ಯತ್ಯಾಸವಾಗುತ್ತದೆ. ಆದರಂತೆ ಮುಳುಗುವ ದಿಕ್ಕು ಪಶ್ಚಿಮಕ್ಕೆ ೨೩.೫° ದಕ್ಷಿಣದಿಂದ ೨೩.೫° ಉತ್ತರದವರೆಗೆ ವ್ಯತ್ಯಾಸವಾಗುತ್ತದೆ. ಉದಾಹರಣೆಗೆ ಸೂರ್ಯನು ಚಿತ್ರದಲ್ಲಿ ಸೂಚಿಸಿದಂತೆ ಅ ದಿಕ್ಕಿನಲ್ಲಿ ಹುಟ್ಟಿದರೆ ಅಂದು ಇ ದಿಕ್ಕಿನಲ್ಲಿ ಮುಳುಗುವನು. ಆ ನಲ್ಲಿ ಹುಟ್ಟಿದರೆ ಇ ನಲ್ಲಿ ಮುಳುಗುವನು, ಇತ್ಯಾದಿ[೨].

ಸೂರ್ಯೋದಯದ ದಿಕ್ಕು A ಇಂದ E ವರೆಗೂ, ಅಂದರೆ ಉತ್ತರದೆಡೆಗೆ, ವ್ಯತ್ಯಾಸವಾಗುವುದಕ್ಕೆ (ಅದೇ ವೇಳೆ ಮುಳುಗುವ ದಿಕ್ಕು a ಇಂದ e ವರೆಗೂ ವ್ಯತ್ಯಾಸವಾಗುವುದಕ್ಕೆ) ಅರ್ಧ ವರ್ಷ ಬೇಕಾಗುತ್ತದೆ. ಇದನ್ನು ಉತ್ತರಾಯಣವೆನ್ನುತ್ತೇವೆ. ಹಿಂತಿರುಗಿ E ಇಂದ A ವರೆಗೂ, ಅಂದರೆ ದಕ್ಷಿಣದೆಡೆಗೆ, ವ್ಯತ್ಯಾಸವಾಗುವುದಕ್ಕೆ (ಅದೇ ವೇಳೆ ಮುಳುಗುವ ದಿಕ್ಕು e ಇಂದ a ವರೆಗೂ ವ್ಯತ್ಯಾಸವಾಗುವುದಕ್ಕೆ ಮತ್ತರ್ಧವರ್ಷ ಬೇಕು. ಇದನ್ನು ದಕ್ಷಿಣಾಯನವೆನ್ನುತ್ತೇವೆ. ಅಂದರೆ ಸೂರ್ಯನು ಸರಿಯಾಗಿ ಪೂರ್ವದಲ್ಲಿ ಹುಟ್ಟಿ, ಸರಿಯಾಗಿ ಪಶ್ಚಿಮದಲ್ಲಿ ಮುಳುಗುವುದು ವರ್ಷಕ್ಕೆ ಎರಡೇ ಬಾರಿ!

ಹಾಗಾದರೆ ಸೂರ್ಯನು A ಎಂಬಲ್ಲಿ ಹುಟ್ಟಿ a ಎಂಬಲ್ಲಿ ಮುಳುಗುವ ದಿನದಂದು ಉತ್ತರಾಯಣಪರ್ವಕಾಲ. ಅಂತಹ ದಿನ ವರ್ಷದಲ್ಲಿ ಯಾವುದೆಂದು ಕಂಡು ಹಿಡಿಯುವುದು ಸುಲಭವಾದ ಕೆಲಸ. ಪ್ರತಿದಿನವೂ ಸೂರ್ಯೋದಯ ಅಥವಾ ಸೂರ್ಯಾಸ್ತವನ್ನು ಗಮನಿಸುತ್ತಿದ್ದರೆ ಸಾಕು. ಹಾಗೆ ಗಮನಿಸಿದಾಗ Dec 21/22 ದಿನಾಂಕವು ಅಂತಹುದೆಂದು ತಿಳಿಯುತ್ತದೆ. ಅಂದರೆ, Dec 21/22 ರಂದು ಸೂರ್ಯನು ಪೂರ್ವ-ಪಶ್ಚಿಮ ರೇಖೆಗೆ ಪರಮಾವಧಿ ದಕ್ಷಿಣದಲ್ಲಿರುತ್ತಾನೆ. ಅಂದಿನಿಂದ ಉತ್ತರಾಯಣ. Mar ೨೦/೨೧ ರಂದು ಸರಿಯಾಗಿ ಪೂರ್ವಕ್ಕೆ ಹುಟ್ಟಿ ಸರಿಯಾಗಿ ಪಶ್ಚಿಮಕ್ಕೆ ಮುಳುಗುವನು (ಚಿತ್ರದಲ್ಲಿ C ಮತ್ತು c). June ೨೦/೨೧ ರಂದು ಪರಮಾವಧಿ ಉತ್ತರಕ್ಕಿರುತ್ತಾನೆ. ಅಂದಿನಿಂದ ಹುಟ್ಟುವ/ಮುಳುಗುವ ದಿಕ್ಕು ದಕ್ಷಿಣದೆಡೆಗೆ ಸಂಚರಿಸಲಾರಂಭಿಸುತ್ತದೆ. ಅಂದಿನಿಂದ ದಕ್ಷಿಣಾಯನ. Sept ೨೨/೨೩ ರಂದು ಮತ್ತೊಮ್ಮೆ ಸರಿಯಾಗಿ ಪೂರ್ವದಲ್ಲಿ ಹುಟ್ಟು, ಪಶ್ಚಿಮದಲ್ಲಿ ಅಸ್ತ. ಹೀಗೆ ಸೂರ್ಯನ ಪ್ರತಿದಿನದ ಗತಿ ವರ್ಷದಲ್ಲಿ ಬದಲಾವಣೆಯಾಗುತ್ತದೆ.

ಈ ನಿರ್ಧಾರಕ್ಕೆ ಇನ್ನೂ ಕೆಲವು ಸಾಕ್ಷಿಗಳು :-

೧ ನಿಮ್ಮ ಮನೆಯಂಗಳದಲ್ಲೇ ಮಾಡಬಹುದಾದಂತಹ ಪ್ರಯೋಗ. ಯಾವುದಾದರೂ ಸ್ಥಿರ ಪದಾರ್ಥದ ನೆರಳಿನ ಗಾತ್ರವನ್ನು Dec ೨೧/೨೨ ಅಥವಾ June ೨೦/೨೧ ರ ಹಿಂದಿನ ಹಾಗೂ ಮುಂದಿನ ಒಂದು ವಾರ ಪ್ರತಿದಿನವೂ ನಿಯತಸಮಯಕ್ಕೆ ಸರಿಯಾಗಿ ಅಳೆಯಿರಿ. Dec ೨೧/೨೨ ಹಾಗೂ June ೨೦/೨೧ ರಂದು ಆ ಗಾತ್ರವು

---

[೨] ಭೂಮಿಯು ಪ್ರತಿದಿನ ತನ್ನ ಸುತ್ತ ಸುತ್ತುವ ಕಕ್ಷೆ ಹಾಗೂ ವಾರ್ಷಿಕವಾಗಿ ಸೂರ್ಯನ

ಸುತ್ತ ಸುತ್ತುವ ಕಕ್ಷೆಗಳ ನಡುವಿನ ಕೋನವು ೨೩.೫$^0$ ಆಗಿರುವುದೇ ಇದರ ಮೂಲ.

---

ಅತಿಹೆಚ್ಚು /ಅತಿಕಡಿಮೆ ಇರುತ್ತದೆ. ಸ್ವಲ್ಪ ಯೋಚಿಸಿದಲ್ಲಿ, ಇದು ಅಯನಗಳ ಆರಂಭದ ಲಕ್ಷಣ ಎಂದು ನೀವೇ ಹೇಳುವಿರಿ.

೨ ದಿನದ 24 ಘಂಟೆಗಳು ಹಗಲು-ರಾತ್ರಿಗಳ ನಡುವೆ ಹೇಗೆ ವಿಭಾಗವಾಗುತ್ತದೆ ಎಂಬುದನ್ನು ಗಮನಿಸಿ. ಉತ್ತರಾಯಣದ ಆರಂಭದ ದಿನದಂದು (Dec ೨೧/೨೨) ಹಗಲಿನ ಪ್ರಮಾಣ (ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಅವಧಿ), ವರ್ಷದ ಬೇರೆಲ್ಲ ದಿನಗಳಿಗೆ ಹೋಲಿಸಿದಲ್ಲಿ ಅತಿಕಡಿಮೆ ಇರುತ್ತದೆ. ಅಂದರೆ ರಾತ್ರಿಯ ಪ್ರಮಾಣ ಪರಮಾವಧಿ ಇರುತ್ತದೆ. ಹಾಗೆಯೇ ದಕ್ಷಿಣಾಯನದ ಆರಂಭದ ದಿನದಂದು (June ೨೦/೨೧) ಹಗಲಿನ ಪ್ರಮಾಣ ಪರಮಾವಧಿ ಇದ್ದು, ರಾತ್ರಿಯು ಅತಿ ಕಡಿಮೆ ಇರುವುದು.[೩] ಪಂಚಾಂಗಗಳಲ್ಲಿ ಪ್ರತಿದಿನದ ಹಗಲಿನ ಪ್ರಮಾಣವನ್ನು ಕೊಟ್ಟಿರುತ್ತಾರೆ. ಅಥವಾ ಸೂರ್ಯೋದಯ ಹಾಗೂ ಸೂರ್ಯಾಸ್ತಗಳ ಸಮಯಗಳಿಂದ ಲೆಕ್ಕ ಹಾಕಬಹುದು. ಉದಾಹರಣೆಗೆ, ಅಂತಹ ನಕ್ಷೆಗಳು ಕೆಳಕಂಡಂತಿರುತ್ತವೆ:




**ಭಾಗವತ** 5/21/7




ಉತ್ತರಾಯಣವನ್ನು Jan ೧೪/೧೫ ರಿಂದ ಆಚರಿಸುವ ಪಂಚಾಂಗಗಳಲ್ಲೂ ಈ ಆಧಾರ ಮೂಡಿಬಂದಿರುವುದು ವಿಶೇಷ. ಈಗಾಗಲೇ ಕೆಲವು ಮಾಧ್ವಪಂಚಾಂಗಗಳಲ್ಲಿ ಉತ್ತರಾಯಣಪರ್ವಕಾಲವನ್ನು Dec ೨೧/೨೨ರಂದು ಮುದ್ರಿಸಿರುವುದನ್ನು ಗಮನಿಸಬೇಕು.

೩ ಬೆಂಗಳೂರಿನ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಪ್ರತಿವರ್ಷವೂ Jan ೧೪/೧೫ರ ಸಂಜೆ ಸೂರ್ಯಕಿರಣವು ಅನೇಕ ಕಿಟಕಿಗಳ ಮೂಲಕ ಹಾಗೂ ನಂದಿಯ ಕೊಂಬಿನ ಮೂಲಕ ಹಾದು ಹೋಗಿ ಶಿವಲಿಂಗದ ಮೇಲೆ ಬೀಳುವುದು ಪ್ರಸಿದ್ಧ. ಆ ದೃಶ್ಯವನ್ನು ನೋಡಲು ಸಾವಿರಾರು ಜನರು ಸೇರುತ್ತಾರೆ.

ಹಿಂದಿನ ಚಿತ್ರವನ್ನು ಗಮನಿಸಿ. ಅಯನಗಳ ಆರಂಭದ ದಿನದಿಂದ 'x' ದಿನಗಳ ಹಿಂದೆ ಸೂರ್ಯನ ಹುಟ್ಟು, ಪ್ರತಿದಿನದ ಗತಿ, ಅಸ್ತ ಎಲ್ಲಾಗಿತ್ತೋ, ಆ ಆರಂಭದ ದಿನದಿಂದ 'x' ದಿನಗಳ ಅನಂತರವೂ ಅಲ್ಲೇ ಆಗುವುದು. ಉದಾಹರಣೆಗೆ, ಉತ್ತರಾಯಣದ ಆರಂಭದ ದಿನದಿಂದ (Dec ೨೧/೨೨), Nov ೨೭/೨೮ ದಿನಾಂಕವು ಸುಮಾರು ೨೪ ದಿನ ಹಿಂದಿದೆ; Jan ೧೪/೧೫ ದಿನಾಂಕವು ಸುಮಾರು ೨೪ ದಿನಗಳು ಮುಂದಿದೆ. ಅಂದರೆ

ಈ ಎರಡು ದಿನಗಳಲ್ಲಿ ಸೂರ್ಯನ ಗತಿ ಒಂದೇ ಇರಬೇಕು. ಹಾಗಾದರೆ Jan ೧೪/೧೫ರಂದು ನಡೆಯುವ ಗವಿಗಂಗಾಧರೇಶ್ವರ ಗುಡಿಯ ಘಟನೆಯು Nov ೨೭/೨೮ ರಂದೂ ನಡೆಯಬೇಕಲ್ಲವೇ. ಆಶ್ಚರ್ಯವೆಂದರೆ Nov ೨೭/೨೮ ರ ಘಟನೆಯು ಅಲ್ಲಿಯ ಅರ್ಚಕರಿಗೇ ಅಪರಿಚಿತ. Jan ೧೪/೧೫ರ ನೂಕು ನುಗ್ಗಲು ಇಲ್ಲದಂತೆ, Nov ೨೭/೨೮ರಂದು ಆ ಘಟನೆಯನ್ನು ವಿರಾಮವಾಗಿ ನೋಡಿ ಆನಂದಿಸಬಹುದು![೪] ಈ ರೀತಿ ಸಮಾನ ಸೂರ್ಯಸಂಬಂಧಘಟನೆಗಳ ನಡುವಿನ ದಿನವಾಗಿರುವುದರಿಂದಲೂ Dec ೨೧/೨೨ ರಂದೇ ಉತ್ತರಾಯಣ ಪ್ರಾರಂಭವೆಂಬುದು ಸಂಶಯಾತೀತ.

ಹೀಗಿದ್ದರೂ ಕೆಲವರು ಉತ್ತರಾಯಣದ ಆಚರಣೆಯನ್ನು Jan ೧೪/೧೫ ರಿಂದ ಮಾಡುವುದಕ್ಕೆ ಕೆಳಗಿನ ಕಾರಣಗಳಿರಬಹುದೆಂಬುದು ನನ್ನ ಊಹೆ :-

೧ ಅಯನಗಳ ಆರಂಭದ ದಿನಗಳು ಸುಮಾರು ಶತಮಾನದಷ್ಟು ಕಾಲದಲ್ಲಿ ಬದಲಾವಣೆಯಾಗುತ್ತವೆ. ಇದನ್ನು Precession of equinoxes ಎಂದು ಕರೆಯುತ್ತಾರೆ. ಧ್ರುವನಕ್ಷತ್ರವು ಉತ್ತರದಿಂದ ವಿಚಲಿತಗೊಳ್ಳುವುದಕ್ಕೂ ಇದೇ ಕಾರಣ[೫]. ಇದನ್ನು ಕಾಲಕ್ಕೆ ತಕ್ಕಂತೆ ಪರಿಗಣಿಸದಿರುವುದು.

೨ ವಿದೇಶೀಯ ಪಂಚಾಂಗಗಳಲ್ಲುಂಟಾದ, ಆಗಿರಬಹುದಾದ, ಆಗುತ್ತಿರುವ ದಿಢೀರ್ ಬದಲಾವಣೆಗಳು.

---

೪. Jayanth Vyasanakere P. and Sudeesh K., Surya Majjana, *Resonance*, 2008, **13**, 768.

೫. ಭೂಮಿಯು ಒಂದು ಪರಿಪೂರ್ಣ ಗೋಳವಲ್ಲ. ದೈನಂದಿನ ಸುತ್ತುವಿಕೆಯಿಂದ ತನ್ನ ಸಮಭಾಜಕವೃತ್ತದ (equator) ಬಳಿ ಹೆಚ್ಚಾಗಿ ಉಬ್ಬಿದೆ. ಆದ್ದರಿಂದ ಸೂರ್ಯಚಂದ್ರರ ಗುರುತ್ವಾಕರ್ಷಣೆಗೊಳಗಾಗಿ ಭೂಮಿಯ ದೈನಂದಿನ ಸುತ್ತಿನ ಕಕ್ಷೆಯು ಬುಗುರಿಯ ಕಕ್ಷೆಯಂತೆ ಓಲಾಡುತ್ತದೆ. ಅಂತಹ ಒಂದು ಪರಿಪೂರ್ಣ ಸುತ್ತಿಗೆ ಸುಮಾರು ೨೬,೦೦೦ ವರ್ಷ ಬೇಕು. ಅಂದರೆ, ಇಂದು ನಿಜವಾದ ಉತ್ತರವನ್ನು ಕೇವಲ ೦.೫$^0$ ದೂರದಿಂದ ಸುತ್ತುತ್ತಿರುವ ಧ್ರುವ ನಕ್ಷತ್ರವು ಇನ್ನೂ ೧೩,೦೦೦ ವರ್ಷಗಳ ಅನಂತರ (ಹಾಗೂ ಮುಂಚೆ) ೪೫$^0$ ಯಷ್ಟು ದೊಡ್ಡಪ್ರಮಾಣದಲ್ಲಿ ಸುತ್ತುತ್ತದೆ. ಇದನ್ನು ನ್ಯೂಟನ್ ನಿಯಮಗಳನುಸಾರ ಕರಾರುವಾಕ್ಕಾಗಿ ಲೆಕ್ಕಹಾಕಬಹುದು ಹಾಗೂ ಪ್ರಾಯೋಗಿಕವಾಗಿ ಪರೀಕ್ಷಿಸಬಹುದು.

ಹಾಗಿದ್ದರೂ ಧ್ರುವನ ಧ್ರುವತ್ವಕ್ಕೆ - ಧ್ರುವ ಪದವಿಯು ಸಾಮಾನ್ಯ ಕಲ್ಪನೆಯಂತೆ ಕೇವಲ ನಕ್ಷತ್ರವಾಗಿರದೇ ತತ್ಕಾಲೀನ ಧ್ರುವ ದಿಕ್ಕಿಗೆ ಸಂಬಂಧಿಸಿರುವುದೋ ಅಥವಾ (ನಕ್ಷತ್ರವೇ ಎಂದು ಪಟ್ಟುಹಿಡಿಯುವುದಾದಲ್ಲಿ) ಧ್ರುವ ದಿಕ್ಕಿಗೆ ಸಮೀಪ ಬರುವ ಅನೇಕ ಪ್ರಮುಖ ನಕ್ಷತ್ರಗಳಲ್ಲೊಂದಾಗಿರುವುದೋ ಕಾರಣವಿರಬೇಕು. ಈ ಬಗ್ಗೆ ಹೆಚ್ಚಿನ ಚಿಂತನೆ ನಡೆಯಬೇಕು. **ಉತ್ತರಾಯಣ ಹಾಗೂ ಸಂಕ್ರಾಂತಿಗಳನ್ನು Dec ತಿಂಗಳಲ್ಲೇ ಆಚರಿಸಿದ್ದು ಹತ್ತಾರು ಶತಮಾನದಷ್ಟು ಪ್ರಾಚೀನವಾದ ನೂರಾರು ಶಿಲಾಶಾಸನಗಳಿಂದ ತಿಳಿಯುತ್ತದೆ.**

ಇದನ್ನು ಮೇಲಿನ ಕಾರಣಗಳಿಂದ ಪರಿಮಾಣಾತ್ಮಕವಾಗಿಯೂ ವಿವರಿಸಲು ಸಾಧ್ಯ.

೩. ಉತ್ತರಾಯಣಕ್ಕೂ ಮಕರಸಂಕ್ರಮಣಕ್ಕೂ ನಂಟಿಲ್ಲ. ಉತ್ತರಾಯಣವು Dec ೨೧/೨೨ ರಂದು ಪ್ರಾರಂಭವಾದರೂ ಅದರ ಆಚರಣೆ ಮಾತ್ರ ತದನಂತರ ಬರುವ ಮೊದಲ ಸಂಕ್ರಮಣದಿಂದ ಎಂದಿರಬಹುದು. ಇದಕ್ಕೆ ಮೊದಲನೆಯದಾಗಿ, ಸೂಕ್ತಪ್ರಮಾಣ ಬೇಕು. ಎರಡನೆಯದಾಗಿ, ಮುಂದೊಂದು ದಿನ (ಕೆಲವು ಶತಮಾನಗಳ ಬಳಿಕ) ಉತ್ತರಾಯಣದ ಅನಂತರ ಬರುವ ಮೊದಲ ಸಂಕ್ರಮಣವು ಧನುಃಸಂಕ್ರಮಣವಾದರೆ ಅಂದಿನಿಂದಲೇ ಉತ್ತರಾಯಣಾಚರಣೆಯನ್ನು ನಾವೀಗ ಒಪ್ಪಬೇಕಾಗುತ್ತದೆ.

ಉತ್ತರಾಯಣ ಆರಂಭವಾಗುವುದು Dec ೨೧/೨೨ ರಂದು ಎಂಬುದರಲ್ಲಂತೂ ಸಂಶಯವಿಲ್ಲ. ಆದರ ಆಚರಣೆಯ ವಿಷಯದ ಬಗ್ಗೆ ಮಾತ್ರ ಹೆಚ್ಚಿನ ಜಿಜ್ಞಾಸೆ ನಡೆಯಬೇಕು. ಇಲ್ಲಿ ವ್ಯತ್ಯಾಸವಾದರೆ ವರ್ಷದಲ್ಲಿ ಸುಮಾರು ೫೦ ದಿನಗಳು ಅಯನಗಳನ್ನು ತಪ್ಪು ಆಚರಿಸಿದಂತಾಗುವುದರಿಂದ ಈ ಬಗ್ಗೆ ಔದಾಸೀನ್ಯ ಸಲ್ಲದು.

## References:

1. Smart, W.M., *Text Book on Astronomy*, Cambridge University press, 1962.

2. P.Jayanth Vyasanakere, K. Sudeesh and B.S. Shylaja, Astronomical significance of the Gavi Gangadhareshwara temple in Bangalore, *Current Science*, 2008, **95, 11**, 1632.

3. B.S. Shylaja, The zodiacal pillars of Sringeri, *Current Science*, 2007, **92, 6**, 846.

(೧೩ನೇ ಪುಟದಿಂದ..)

ಕರ್ಮ ಆದರ ಹಿನ್ನಲೆಯ ಜ್ಞಾನಭಕ್ತಿಗಳಿಗಾಗಿ ಭಗವಂತನ ಮೆಚ್ಚುಗೆಗೆ ಪಾತ್ರವಾಗಿ ಅವನ ಪೂಜೆ ಎನಿಸಬಲ್ಲದು.

ಈ ಅನುಸಂಧಾನದ ಹಿನ್ನಲೆಯಲ್ಲಿ **'ಭಗವತ್ಪ್ರೀತ್ಯರ್ಥಂ'** ಕರ್ಮ ಕರಿಷ್ಯೇ ಎಂಬ ಸಂಕಲ್ಪ ನಡೆಸುವಂತಾಗಬೇಕು.

ಮುಂದಿನ ಪ್ರಶ್ನೆ-ನಿತ್ಯ ಸುಪ್ರೀತನಾಗಿರುವ ಭಗವಂತ ನಮ್ಮ ಕರ್ಮದಿಂದ ಅಧಿಕ ಪ್ರೀತನಾಗುವುದಾದರೂ ಹೇಗೆ? **'ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್'-** ಎಂದು ಶ್ರೀ ಮಧ್ವರ ಮಾತಿನ ಹಿನ್ನಲೆಯಲ್ಲಿ **'ಅಲಂ ಪ್ರೀಯತಾಂ'** ಇನ್ನಷ್ಟು ಚೆನ್ನಾಗಿ ಪ್ರೀತನಾಗಲಿ ಎಂದು ಹಾರೈಸುವುದಾದರೂ ಹೇಗೆ ಕೂಡುವುದು? ಈ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಪರಿಶೀಲಿಸೋಣ. ★

ವಿಚಾರ ಮಂಥನ

# ರಾಘವೇಂದ್ರರ ಸಂಸ್ಕೃ ತ ಸಾಹಿತ್ಯದ ಸಂಶೋಧನೆ

-ಉಂಡಾರು ಭಾಷ್ಯಂ ಶ್ರೀನಿವಾಸಚಾರ್ಯ

ರಾಘವೇಂದ್ರ ಶ್ರೀಪಾದರ ಗ್ರಂಥಗಳ ಅಧ್ಯಯನ ಎಷ್ಟು ಮಾಡಿದರೂ ಸಾಲದು. ಒಂದು ವಿಷಯವನ್ನು ಇದು ಹೀಗೇ ಎಂದು ಬರೆದರೆ ಅದನ್ನು ಮತ್ತೆ ಅಳಿಸುವ ಮಾತೇ ಇಲ್ಲ. ಮುಖ್ಯಪ್ರಾಣಾವಿಷ್ಟರಾದ ಅವರ ಮಹಿಮೆ ಅಪಾರವಾದುದು. ಅವರಿಗಿದ್ದ ಸಂಸ್ಕೃತ ಸಾಹಿತ್ಯದ ಗೌರವವೂ ಮಹತ್ತಾದುದು. ಅವರ ಗ್ರಂಥ ಅಧ್ಯಯನ ಮಾಡಿದಾಗ ಈ ವಿಚಾರ ತಿಳಿಯುತ್ತದೆ. ಬನ್ನೀ ಅದರೆಡೆ ನೋಡೋಣ.

ಕೋಶವೆಂದರೆ ನಮ್ಮಲ್ಲಿ ಪ್ರಸಿದ್ಧವಾದುದು ಅಮರ ಕೋಶವೇ. ಇದರಲ್ಲಿ ಸಿಂಹಾದಿ ವರ್ಗದಲ್ಲಿ ೨೯ನೇ ಶ್ಲೋಕ -

**ದ್ವಿರೇಫ ಪುಷ್ಪ ಲಿಡ್ ಭೃಂಗ ಷಟ್‌ಪ್ರದ ಭ್ರಮರಾಲಯಃ ||**

ಎಂದು ದುಂಬಿಗೆ ಸಮಾನಾರ್ಥಕ ಪದ ಹೇಳಿದೆ. ನಂತರದ ವಾಕ್ಯ

**ಇಂದಿಂದಿರಶ್ಚಂಚರೀಕೋ ರೋಲಂಬೋ ಬಂಭರಶ್ಚಸಃ** ಎಂದಿದೆ.

ಆದರೆ ಈ ವಾಕ್ಯ ಪ್ರಕ್ಷಿಪ್ತವೋ ಅಥವಾ ಯಥಾರ್ಥವಾದುದೋ ಎಂದು ಚಿಂತೆ. ಸಾಹಿತ್ಯಕಾರರು ಇದಕ್ಕೆ ಪರಿಹಾರ ಕೊಡಲಾರರು. ಆದರೆ ಮಂತ್ರಾಲಯದ ಪ್ರಭುಗಳಾದ ಶ್ರೀರಾಘವೇಂದ್ರರು ಇದಕ್ಕೆ ಪರಿಹಾರ ನೀಡಿದ್ದಾರೆ.

ಶ್ರೀಮನ್ನ್ಯಾಯಸುಧಾ-ಪರಿಮಳ-ಜಿಜ್ಞಾಸಾಧಿಕರಣ ಪ್ರಾರಂಭದ ೨ನೇ ಶ್ಲೋಕ.

**ಶ್ರೀಮದಾನಂದತೀರ್ಥಾರ್ಯ ಸನ್ಮನಃ ಸರಸೀ ಭುವಿ|**

**ಅನುವ್ಯಾಖ್ಯಾನ ನಲಿನೇ ಚಂಚರೀಕತಿ ಮೇ ಮನಃ ||**

-ಎಂಬುದು ಪರಿಮಳದ ಮಾತು.

**ಚಂಚರೀಕ...** ಎಂದರೆ ಭ್ರಮರ ಎಂದರ್ಥ ಏಕೆ? ಶಬ್ದರತ್ನಾಕರ ಎಂಬ ಗ್ರಂಥದಲ್ಲಿ ಇಂದಿಂದಿರ ಭ್ರಮರ ಷಟ್‌ಪದ ಚಂಚರೀಕಾ ಎಂದಿದೆ. ಸರಿ

ಮುಂದೇನು.

**ಪರಿಮಳ-** ಇಂದಿಂದಿರಶ್ಚಂಚರೀಕ ಇತಿ ಕ್ವಾಚಿತ್ಕ ಅಮರಪಾಠಃ ಪ್ರಕ್ಷಿಪ್ತಃ, ಅನೇಕ ಕೋಶೇ ಷ್ವದರ್ಶನಾತ್, ತದ್ ವ್ಯಾಖ್ಯಾತೃಭಿಃ ಅಸ್ಪೃಷ್ಟತ್ವಾಚ್ಚ॥

ಈಗ ಉಪಲಬ್ಧವಿರುವ ಆ ಕೋಶದಲ್ಲಿ ಇಂದಿಂದಿರ...ಸಃ ಎಂದು ಸಿಂಹವರ್ಗದ ೫೫೫ನೇ ಶ್ಲೋಕವಾಗಿ ಮುದ್ರಿತವಾಗಿದೆ.

ಆದರೆ ಇದು ಪ್ರಕ್ಷಿಪ್ತ. ಯಾರೋ ಶಬ್ದರತ್ನಾಕರ ಓದಿದವರು ಅಮರ ಹೇಳುತ್ತಾ ಹೇಳುತ್ತಾ ಸೇರಿಸಿಬಿಟ್ಟಿದ್ದಾರೆ. ಏಕೆಂದರೆ ರಾಯರು ತಿಳಿಸಿದಂತೆ ೨ ಕಾರಣಗಳಿವೆ.

೧) ಅನೇಕ ಕೋಶಗಳಲ್ಲಿ ಈ ವಿಧದ ಪಾಠವಿಲ್ಲ.

೨) ಅಮರ ಕೋಶಕ್ಕೆ ಸುಧಾ-ವ್ಯಾಖ್ಯಾನದಲ್ಲಿ ಈ ಶ್ಲೋಕವೂ ಇಲ್ಲ ಅದಕ್ಕೆ ವ್ಯಾಖ್ಯಾನವೂ ಇಲ್ಲ.

ಅದಕ್ಕೆಂದೇ ರಾಯರು ಹೇಳಿದ್ದು ಅಸ್ಪೃಷ್ಟತ್ವಾತ್ ಸ್ಪರ್ಶವೇ ಆಗಿಲ್ಲ ಎಂದು.

ಸುಧಾ ವ್ಯಾಖ್ಯಾನದಲ್ಲಿ ಭ್ರಮರಾಲಯ-ಶಬ್ದದ ವ್ಯಾಖ್ಯಾನದ ನಂತರ ಮಯೂಶೀತಿ ಎಂಬ ಪ್ರತೀಕ ತೆಗೆದುಕೊಂಡು ರಾಯರು ಹೇಳಿದ್ದು ಸ್ಪಷ್ಟವಾಗಿ ಇಲ್ಲಿ ತಿಳಿಯುತ್ತದೆ. ಬಹಳ ಕೋಶಗಳಲ್ಲಿ ಈ ವಾಕ್ಯವಿಲ್ಲ ಎಂಬ ರಾಯರ ಮಾತು ಗಮನಿಸಿದಾಗ ಅವರು ಬಹಳ ಕೋಶಗಳನ್ನು ನೋಡಿದ್ದರೆಂದು ತಿಳಿಯುತ್ತದೆ.

ಒಟ್ಟಿನಲ್ಲಿ ಮೋಕ್ಷೋಪಯೋಗಿ ಶಾಸ್ತ್ರಕ್ಕೆ ಟಿಪ್ಪಣಿ ಬರೆಯುವಾಗಲೂ ರಾಯರಿಗಿದ್ದ ಕೋಶ, ಅದರ ವ್ಯಾಖ್ಯಾನ ಮತ್ತು ಶುದ್ಧ ಪಾಠಗಳ ಕಾಳಜಿ ಅಸದೃಶವಾದುದು. ಇದಕ್ಕೆ ಅವರ ಮಾತೇ ಸಾಕ್ಷಿ. ಇಂತಹ ಅಪೂರ್ವಾಂಶಗಳು ಪರಿಮಳ ಘ್ರಾಣಾಸಕ್ತರಿಗೆ ಪರಿಮಳದಲ್ಲಿ ಸಿಗುತ್ತದೆ.

ಇಂತಹ ಅಪೂರ್ವ ಸಂಗತಿಯನ್ನು ಪರಿಮಳದಲ್ಲಿ ಮೆಟ್ಟಿರುವ ಕಲಿಯುಗದ ಕಾಮಧೇನುವೆನಿಸಿದ ಮೂಲರಾಮಚಂದ್ರನ ಆರಾಧನಾಗ್ರೈಯುತ್ತ ಇಂದಿಗೂ ಶ್ರೀಹಯಗ್ರೀವ ದೇವರನ್ನು ಧ್ಯಾನಿಸುತ್ತಾ ಇರುವ ಶ್ರೀರಾಘವೇಂದ್ರತೀರ್ಥರಿಗೆ ನಮೋನಮಃ॥

**ಪ್ರಶ್ನೋತ್ತರ ಪದಬಂಧ**

# ನೆನಪಿನ ಅಂಗಳ

ವಿ|| ಶಂಕರನಾರಾಯಣಾಚಾರ್ಯ

೧) ಭಗವಂತನನ್ನು ಪ್ರತಿನಿಧಿಸುವ ಏಕಾಕ್ಷರ ಯಾವುದು?

೨) ಎರಡು ಪಕ್ಷಗಳು ಯಾವುದು?

೩) ಎರಡು ಆಯನಗಳು ಯಾವುವು?

೪) ಇತಿಹಾಸ-ಪುರಾಣಗಳೆಂದು ಪ್ರಸಿದ್ಧಗಳಾದ ಎರಡು ಕಾವ್ಯಗಳಾವುವು?

೫) ಸಂಸ್ಕೃತ ವ್ಯಾಕರಣ ರೀತ್ಯಾ ಎರಡು ಪ್ರಯತ್ನಗಳಾವುವು?

೬) ರಾಜಾ ಉತ್ತಾನಪಾದನ ಇಬ್ಬರು ಮಡದಿಯರಾರು?

೭)'ತಾರ್ಕಿಕ ರೀತ್ಯಾ' 'ಸಾಮಾನ್ಯ' ದ ಎರಡು ವಿಧಗಳು ಯಾವುವು?

೮) ಗೌರಿಶಿಖರವನ್ನು ಮೊದಲ ಬಾರಿ ಏರಿದ ಇಬ್ಬರು ಯಾರು?

೯) ಸುಮಿತ್ರೆಯ ಇಬ್ಬರು ಪುತ್ರರು ಯಾರು?

೧೦) ರಾಮನ ಇಬ್ಬರು ಪುತ್ರರು ಯಾರು?

## ಹಿಂದಿನ ಸಂಚಿಕೆಯ ಉತ್ತರಗಳು

೧) ಸುಮ ೨) ಏಳು ೩) ನರಕ ೪) ೪,೩೨,೦೦೦ ವರ್ಷಗಳು ೫) ಪರಶುರಾಮ
೬) ಕಚ್ಛಪೀ ೭) ಮಹತೀ ೮) ರುದ್ರ ೯) ಸ್ವಾಹಾ ೧೦) ಮುದ್ಗಲ

| | | | | | |
|---|---|---|---|---|---|
| ೧ ಕುಂ | ೨ ಭ | ೩ ಕ | ರ್ಣ | | ೪ ಕಾ |
| ಜ | ೫ ರ | ದ | | ೬ ಮಂ | ಚ |
| ೭ ರ | ಣೇ | | ೮ ದಾ | ರಿ | |
| ವ | | ೯ ಸೇ | | ಗ್ರಿ | ೧೦ ಅ |
| ೧೧ ರ | ಘು | ವಂ | ಶ | ೧೨ ಭಾ | ನು |
| ದ | | ತಿ | | ರ | ಚ |
| | ೧೩ ಬೇ | ಗೆ | | ವಿ | ರ |

## ಎಡದಿಂದ ಬಲಕ್ಕೆ

೧) ತಾಯಿ ಗರ್ಭದಲ್ಲಿ ಹೊತ್ತ ಒಂಭತ್ತು ತಿಂಗಳು (೪)

೪) 'ದನ 'ಹೊರಡಿಸಿದ ಶಬ್ದ (೨)

೫) ಅರಸನ ಕಾಡು (೪)

೭) ಲಕುಮಿ ತಿರುಗಿ 'ಕಾಮ'ವಾಗಿದ್ದಾನೆ (೨)

೮) ಬಡವನಿಗೆ ಹುಟ್ಟಿದವಳು (೩)

೧೦) ಗಾಳಿಯನ್ನು ಕೊಡುವವ (೩)

೧೧) ಹೆಣವೂ ಬಾಯ್ಬಿಡುವ ಸಂಪತ್ತು ತಿರುಗಿದೆ (೨)

೧೨) ವೆಂಕಟ ಪರಿಹರಿಸುವ ಇದು ತಿರುಗಿದೆ (೩)



ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ

೧) ಹೊಸದಾಗಿ ಬಂದ ರಾಮ ಕಥೆ (೬)

೨) ಲಕುಮಿಯ ಗಂಡನಿವ (೩)

೩) ಯತಿಗಳ ಕಾಲಿಗೆ ಮಾಡಿದ ಆರಾಧನೆ (೪)

೬) ಹೊಳೆಯ ತೀರ (೪)

೯) ಜಗಳ 'ಕದ' ದಿಂದ ತಿರುಗಿ ಬಿದ್ದಿದೆ (೩)